# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:01 Volume:01 • ಸಂಚಿಕೆ:279 Issue:279 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 03.04.2024 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2



NOW HAMPI TIMES E-PAPER HAS BEEN REACHED
50,000 Plus readers
Place Your Ads here
Reach New Audience
9448633038 Contact For: News, Events Coverage, Ads
hampitimes@gmail.com Valmiki Circle, Hosapete-583201


## ನಿಮ್ಮ ಮತವೇ ನಿರ್ಣಾಯಕವಾದೀತು, ಮರೆಯದಿರಿ ಮತದಾನ

- ಹಂಪಿ ಟೈಮ್ಸ್ ಬಳಗ




ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ

Organic Coconut & Banana, Moringa oleifera Available in best Price

98458 65204 ಮೃತ್ಯುಂಜಯನಗರ, ಹೊಸಪೇಟೆ


# ನಾಟಕಗಳು ಸಮಾಜದ ಕನ್ನಡಿ

## ಪರ್ತಕರ್ತ, ನಾಟಕಕಾರ ಡಾ. ಗಣೇಶ ಅಮೀನಗಡ ಹೇಳಿಕೆ | ಶ್ರೀರಂಗರ ನಾಟಕಗಳ ವೈಶಿಷ್ಟ್ಯ

**ಹಂಪಿ ಟೈಮ್ಸ್ ಹೊಸಪೇಟೆ**

ಸ್ವಾತಂತ್ರ್ಯ ನಂತರದ ಕಾಲಘಟ್ಟದ ಮೌಲ್ಯಗಳ ಸ್ಥಿತ್ಯಂತರಗಳನ್ನು, ಪಲ್ಲಟಗಳನ್ನು ಹಾಗೂ ವಿದ್ಯಮಾನಗಳನ್ನು ತಮ್ಮ ನಾಟಕಗಳ ಮೂಲಕ ಪ್ರಸ್ತುತಪಡಿಸಿದವರು ಶ್ರೀರಂಗರು' ಎಂದು ಪರ್ತಕರ್ತರು ಮತ್ತು ನಾಟಕಕಾರರಾದ ಡಾ. ಗಣೇಶ ಅಮೀನಗಡ ಹೇಳಿದರು.



ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಮಂಗಳವಾರ ಶ್ರೀರಂಗ ದತ್ತಿ ನಿಧಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಮತ್ತು ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ "ಶ್ರೀರಂಗರ ನಾಟಕಗಳ ವೈಶಿಷ್ಟ್ಯ" ಕುರಿತು ಮಾತನಾಡಿದರು. 9ನೇ ಶತಮಾನದ ಆರಂಭದಲ್ಲಿ ಪಶ್ಚಿಮಕ್ಕೆ ಒಡ್ಡಿಕೊಂಡಿದ್ದ ರೀತಿ, ಸಂಕಟ, ಸವಾಲುಗಳ ಸಂಕೇತವಾಗಿದ್ದ ಶ್ರೀರಂಗರು ತಮ್ಮ ನಾಟಕಗಳಲ್ಲಿ ಸಮಾಜದ ಸಮಸ್ಯೆಗಳನ್ನೆ ವಸ್ತು, ತಂತ್ರ ಮತ್ತು ನಾಟಕಗಳ ಪ್ರಯೋಗದ ದೃಷ್ಟಿಯಿಂದ ಭಿನ್ನವಾದ ನಾಟಕಗಳನ್ನು ಕನ್ನಡ ನಾಟಕ ಲೋಕಕ್ಕೆ ನೀಡಿದ್ದಾರೆ ಎಂದು ಕೆಲವು ನಾಟಕಗಳನ್ನು ಉದಾಹರಿಸುವುದರೊಂದಿಗೆ ವಿವರಿಸಿದರು.

ಕನ್ನಡ ವಿ.ವಿ. ಕುಲಪತಿ ಡಾ. ಡಿ.ವಿ.ಪರಮಶಿವಮೂರ್ತಿ ಅಧ್ಯಕ್ಷತೆವಹಿಸಿ ಮಾತನಾಡಿ, ಶ್ರೀರಂಗರು ಮೇಲ್ವರ್ಗದಲ್ಲಿ ಹುಟ್ಟಿದರೂ ಕೂಡ ಅವರ ನಾಟಕಗಳ ಸಾರಾಂಶಗಳೆಲ್ಲವೂ ಸಾಮಾಜಿಕ ಸಮಸ್ಯೆಗಳ ಕುರಿತು ಸಂದೇಶವನ್ನು ನೀಡುವಂತವು ಎಂದು ಹೇಳಿದರು. ಅಲ್ಲದೇ ಪ್ರದರ್ಶನಗೊಳ್ಳುವ ಗಣೇಶ ಅಮೀನಗಡ ಅವರ 'ಕೌದಿ' ನಾಟಕ ಕೌದಿ ಹೊಲೆಯುವವರ ಬದುಕು ಬವಣೆಗಳನ್ನು ತಿಳಿಸುತ್ತದೆ ಎಂದರು.

ಶ್ರೀರಂಗ ದತ್ತಿ ನಿಧಿ ಸಂಚಾಲಕ ಕನ್ನಡ ಭಾಷಾಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ಅಶೋಕ ಕುಮಾರ ರಂಜೇರೆ ಪ್ರಾಸ್ತಾವಿಕ ಮಾತನಾಡಿ, ನಾಟಕ ಕ್ಷೇತ್ರಕ್ಕೆ ಟಿ.ಪಿ ಕೈಲಾಸಂ ಅವರನ್ನು ಬಿಟ್ಟರೆ ಕನ್ನಡ ರಂಗಭೂಮಿಗೆ ರಚನೆ ಮತ್ತು ನಿರ್ದೇಶನದ ದೃಷ್ಟಿಯಿಂದ ಹೊಸ ತಿರುವನ್ನು ನೀಡಿದವರು ಶ್ರೀರಂಗರು ಎಂದು ಅಭಿಪ್ರಾಯಪಟ್ಟರು.

ಕನ್ನಡ ಭಾಷಾಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಪಿ ಮಹಾದೇವಯ್ಯ, ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಡಿ. ಪಾಂಡುರಂಗ ಬಾಬು, ಲಲಿತ ಕಲಾ ನಿಕಾಯದ ಡೀನರಾದ ಡಾ. ಶಿವಾನಂದ ಎಸ್ ವಿರಕ್ತಮಠ, ವಿಜ್ಞಾನಗಳ ನಿಕಾಯದ ಡೀನರಾದ ಡಾ. ಶೈಲಜಾ ಹಿರೇಮಠ ಸೇರಿದಂತೆ ಇತರರು ಉಪಸ್ಥಿತರಿದ್ದರು. ಸಂಶೋಧನಾರ್ಥಿಗಳಾದ ದಿನೇಶ್ ಎಸ್., ಶಿಲ್ಪ ಹೆಚ್. ವಿ., ಶ್ರೀದೇವಿ, ಹಾಗೂ ಅಂಬಿಕಾ, ವಿನೀತಾ ಜೆ.ಎಂ ನಿರ್ವಹಿಸಿದರು.

## ಭಾಗ್ಯಶ್ರೀ ಬಿ.ಪಾಳರಿಂದ ಕೌದಿ ಏಕವ್ಯಕ್ತಿ ರಂಗ ಪ್ರಯೋಗ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ಶ್ರೀರಂಗ ದತ್ತಿನಿಧಿ ವತಿಯಿಂದ ಕವಿತಾ ರಂಗ ತಂಡ, ಮೈಸೂರು ಪ್ರಸ್ತುತಪಡಿಸಿದ ಗಣೇಶ ಅಮೀನಗಡರವರ ಹೊಸ ನಾಟಕವಾದ 'ಕೌದಿ' ಏಕವ್ಯಕ್ತಿ ರಂಗ ಪ್ರಯೋಗ ಮಂಗಳವಾರ ಅನಾವರಣಗೊಂಡಿತು. ಈ ನಾಟಕವು ಬಣ್ಣ ಬಣ್ಣದ ಹಲವು ಅರಿವೆಗಳನ್ನು ಕೂಡಿಸಿ ಹೊಲಿದ ರೂಪಕವಾಗಿ ಕೌದಿ ಸಿದ್ಧಗೊಳ್ಳುವ ಬಗೆ ಮತ್ತು ಸರ್ವ ಋತುಗಳಿಗೂ ಹಳ್ಳಿಗರಿಗೆ ಮೆಚ್ಚಿನ ಹೊದಿಕೆಯಾಗಿದ್ದರ ಬಗೆಗೆ ನೊಡುಗರಿಗೆ ತಮ್ಮ ಕೌದಿಯ ಭಾವಕತೆಯನ್ನು ಮನಸ್ಸು ಮುಟ್ಟುವ ಹಾಗೆ ತೆರೆಕಂಡಿತು. ಕೌದಿ ತಯಾರಿಸುವವರ ಆರ್ಥಿಕ ಬೆಂಬಲವಿಲ್ಲದೆ ಕಷ್ಟ ಪಡುತ್ತಿದ್ದಾರೆ. ಇದು ಅವರ ಬದುಕು ಬವಣೆಗಳ ಕುರಿತ ಬೆಳಕು ಚೆಲ್ಲುವ ಕಥಾಹಂದರವನ್ನು ಹೊಂದಿದ ನಾಟಕ ಮನಸೂರೆಗೊಂಡಿತು. ನಾಟಕದಲ್ಲಿ ಅಭಿನಯಸಿದ ಭಾಗ್ಯಶ್ರೀ ಬಿ.ಪಾಳ ಅವರಿಗೆ ಕುಲಪತಿಗಳು ಸನ್ಮಾನಿಸಿದರು.



# ಗ್ರಾಮ ದೇವತೆ ಊರಮ್ಮ ದೇವಿ ಉತ್ಸವ ಅದ್ದೂರಿ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಶ್ರೀಗ್ರಾಮ ದೇವತೆ ಊರಮ್ಮ ದೇವಸ್ಥಾನ ಜೀರ್ಣೋದ್ಧಾರ ಅಭಿವೃದ್ಧಿ ಸಮಿತಿವತಿಯಿಂದ 9 ವರ್ಷಗಳ ನಂತರ ಊರಮ್ಮ ದೇವಿ ಜಾತ್ರಾ ಮಹೋತ್ಸವದಂಗವಾಗಿ ದೇವಸ್ಥಾನದಲ್ಲಿ ಮಂಗಳವಾರ ಹೋಮ, ವಿವಿಧ ಧಾರ್ಮಿಕ ಕಾರ್ಯಗಳು ಶ್ರದ್ಧಾಭಕ್ತಿಗಳಿಂದ ಜರುಗಿದವು.

ಶಾಸಕ ಹೆಚ್.ಆರ್.ಗವಿಯಪ್ಪ, ಮುಖಂಡರಾದ ರಾಣಿಸಂಯುಕ್ತ, ರಾಜವರ್ಧನ, ಸಿದ್ದಾರ್ಥಸಿಂಗ್, ಎಚ್.ಜಿ.ವಿರುಪಾಕ್ಷ, ಮಹ್ಮದ್ ಇಮಾಮ್ ನಿಯಾಜಿ., ದೇವಸ್ಥಾನ ಸಮಿತಿ ಪದಾಧಿಕಾರಿಗಳು ಸೇರಿದಂತೆ ಗಣ್ಯರು ಭಾಗವಹಿಸಿದ್ದರು. ಬೆಳಿಗ್ಗೆಯಿಂದಲೆ ಭಕ್ತರು ದೇವಿ ದರ್ಶನಕ್ಕೆ ಸಾಲುಗಟ್ಟಿ ನಿಂತು ದೇವಿಗೆ ನೈವೇದ್ಯ ಫಲಪುಷ್ಪ ಸಮರ್ಮಿಸಿ ದರ್ಶನ ಪಡೆದರು. ಸಂಜೆ ನಗರದ ಪ್ರಮುಖ ರಸ್ತೆಗಳಲ್ಲಿ ಶ್ರೀ ಊರಮ್ಮದೇವಿಯ ಉತ್ಸವ ಮೂರ್ತಿಯೊಂದಿಗೆ ಕಲಾ ತಂಡಗಳ ಕಲೆ ಪ್ರದರ್ಶನ ಜನರ ಗಮನ ಸೆಳೆದವು.



# ಏ 5ಕ್ಕೆ ಡಾ.ಬಾಬು ಜಗಜೀವನ್ ರಾಂ ಜಯಂತಿ

**ಹಂಪಿ ಟೈಮ್ಸ್ ಹೊಸಪೇಟೆ**

ಹಸಿರು ಕ್ರಾಂತಿಯ ಹರಿಕಾರ ಹಾಗೂ ಮಾಜಿ ಉಪಪ್ರಧಾನಮಂತ್ರಿಗಳಾದ ಡಾ.ಬಾಬು ಜಗಜೀವನ್ ರಾಂ ಅವರ 117ನೇ ಜಯಂತಿ ಕಾರ್ಯಕ್ರಮವನ್ನು ವಿಜಯನಗರ ಜಿಲ್ಲೆಯಲ್ಲಿ ಜಿಲ್ಲಾಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಏ.5ರಂದು ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 9 ಗಂಟೆಗೆ ಹೊಸಪೇಟೆ ನಗರದ ಶುಗರ್ ಫ್ಯಾಕ್ಟರಿ (ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿ) ಮುಂಭಾಗದಲ್ಲಿರುವ ಡಾ.ಬಾಬು ಜಗಜೀವನ್ ರಾಂ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು ಮತ್ತು 9.30ಕ್ಕೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ಆಯೋಜಿಸಲಾಗಿದೆ. ವಿಜಯನಗರ ಜಿಲ್ಲೆಯ ಎಲ್ಲಾ ಸಮುದಾಯದ ಸಂಘ-ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಜಿಲ್ಲಾ, ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ವಿ. ತಿಳಿಸಿದ್ದಾರೆ.

# ಏ.17 ಎಂ.ಎಂ.ಹಳ್ಳಿ ಶ್ರೀಲಕ್ಷ್ಮಿ ನಾರಾಯಣಸ್ವಾಮಿ ಶ್ರೀಆಂಜನೇಯಸ್ವಾಮಿ ಜೋಡಿ ರಥೋತ್ಸವ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಪಟ್ಟಣದ ಶ್ರೀ ಲಕ್ಷ್ಮಿ ನಾರಾಯಣಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಜೋಡಿ ರಥೋತ್ಸವಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಗಳಾದ ಎಂ.ಎಸ್.ದಿವಾಕರ ಅವರು ಹೇಳಿದರು.

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ಇವರಿಂದ ಏಪ್ರೀಲ್ 17ರಂದು ನಡೆಯುವ ಮರಿಯಮ್ಮನಹಳ್ಳಿ ಪಟ್ಟಣದ ಜೋಡಿ ರಥೋತ್ಸವ ಕುರಿತು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಏಪ್ರಿಲ್ 2ರಂದು ನಡೆದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಥೋತ್ಸವ ಕಾರ್ಯಕ್ರಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರುವುದರಿಂದ ದಿನೇದಿನೆ ಬಿಸಿಲು ಹೆಚ್ಚುತ್ತಿದ್ದರಿಂದ ಸಾರ್ವಜನಿಕರ ಆರೋಗ್ಯದ ಬಗ್ಗೆ ಮುಂಜಾಗ್ರತಾ ಕ್ರಮ ವಹಿಸಬೇಕು. ಜನರಿಗೆ ಕುಡಿಯುವ ನೀರಿಗೆ ಅನುಕೂಲತೆ ಕಲ್ಪಿಸಬೇಕು. ಅಗತ್ಯವಿರುವ ಕಡೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ಅಕ್ರಮಗಳನ್ನು ತಡೆಗೆ ಕ್ರಮ ವಹಿಸಬೇಕು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವುದರಿಂದ ಸುಗಮ ಸಂಚಾರಕ್ಕೆ ಅನುಕೂಲವಾಗುವ ಹಾಗೆ ರಸ್ತೆ ಮಾರ್ಗದ ವ್ಯವಸ್ಥೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಶ್ರೀ ಲಕ್ಷ್ಮಿ ನಾರಾಯಣಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿ ಜೋಡಿ ರಥೋತ್ಸವ ಹಿನ್ನೆಲೆಯಲ್ಲಿ ನಾನಾ ಕಾರ್ಯಕ್ರಮಗಳು ನಡೆಯಲಿವೆ. ಏಪ್ರಿಲ್ 14ರಂದು ಹನುಮಂತೋತ್ಸವ, ಏಪ್ರೀಲ್ 15ರಂದು ಗರುಡೋತ್ಸವ, ರಾತ್ರಿ 10 ಗಂಟೆಗೆ ಉಡಿತುಂಬುವ ಕಾರ್ಯಕ್ರಮ, ಏಪ್ರೀಲ್ 16ರಂದು ಬಿಳಿ ಆನೆ ಉತ್ಸವ, ಏಪ್ರೀಲ್ 18ರಂದು ಪೂರ್ಣಾಹುತಿ, ಕಂಕಣ ವಿಸರ್ಜನೆ, ವಸಂತೋತ್ಸವ ಕಾರ್ಯಕ್ರಮಗಳು ನಡೆಯಲಿವೆ ಎಂದು ಇದೆ ವೇಳೆ ಉಪ ತಹಸೀಲ್ದಾರು ಮತ್ತು ಶ್ರೀ ಲಕ್ಷ್ಮಿ ನಾರಾಯಣಸ್ವಾಮಿ ಮತ್ತು ಶ್ರೀ ಆಂಜನೇಯ ದೇವಸ್ಥಾನದ ಆಡಳಿತಾಧಿಕಾರಿಯಾದ ನಾಗರಾಜ್ ಹೆಚ್ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ತಹಸೀಲ್ದಾರರಾದ ಶ್ರುತಿ ಎಂ.ಎಂ., ಮರಿಯಮ್ಮನಹಳ್ಳಿ ಪಿಎಸ್ಐ ಮೌನೇಶ, ಜೆಸ್ಕಾಂನ ದಯಾನಂದ ಜೆ., ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಲೋಕೋಪಯೋಗಿ ಇಲಾಖೆಯ ಅಭಿಯಂತರರು, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು ಸೇರಿದಂತೆ ಇತರರು ಇದ್ದರು.


ಸ್ಥಳೀಯ ಸಮಗ್ರ ಸುದ್ದಿಗಾಗಿ
ಹಂಪಿ ಟೈಮ್ಸ್ ಇ-ಪೇಪರ್
ನಿತ್ಯ ಓದಲು ಕೆಳಗಿನ QR
ಸ್ಕ್ಯಾನ್ ಮಾಡಿ ಗ್ರೂಪಿಗೆ ಸೇರಿರಿ

HAMPI TIMES (G-50)
WhatsApp group

ಇಂಡಸ್ಟ್ರೀಯಲ್ ಶೆಡ್ ಸೈಟ್ ಮಾರಾಟಕ್ಕಿದೆ

ಹೊಸಪೇಟೆ ನಗರದ ಟಿ.ಬಿ.ಡ್ಯಾಂ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಎದುರಿನ ಕೆಎಸ್ಎಸ್ಐಡಿಸಿ (KSSIDC) ಇಂಡಸ್ಟ್ರೀಯಲ್ ಪ್ರದೇಶದಲ್ಲಿರುವ ಅನ್ನಪೂರ್ಣ ಗ್ರಾನೈಟ್ ಶೆಡ್ ಹಾಗೂ ಖಾಲಿ ಜಾಗ (L-19, R-15 ) ಎರಡು ಸೈಟುಗಳ ಒಟ್ಟು ವಿಸ್ತೀರ್ಣ 10,300 ಚ.ಅಡಿ ಇದ್ದು, ಮಾರಾಟಕ್ಕಿರುತ್ತದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

98441 25317
99861 33299

ಹೊಲ ಮಾರಾಟಕ್ಕಿದೆ

ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ವ್ಯಾಪ್ತಿಯ ಡಣಾಯಕನ ಕೆರೆ ಕ್ರಾಸ್ ಬಳಿ ಕೂಡ್ಲಿಗಿ–ಹೊಸಪೇಟೆ ಎನ್.ಎಚ್ ರೋಡ್(NH ROAD) ಪಕ್ಕದಲ್ಲಿ 4 ಎಕರೆ ಹೊಲ ಮಾರಾಟಕ್ಕಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

Contact: 94497 39665

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ e-paper
REACH EVERY WHERE NO BORDER




9448633038
www.hampitimes.com

Best Franchise (Dealership) Opportunity

in the following Pin codes

We are an innovative company Looking for Dynamic partners who can associate with us in exploring New Digital Business for a Life time Earnings

| Sl.no | Location/s | Pin code | Sl.no | Location/s | Pin code |
|---|---|---|---|---|---|
| 1 | Koppal | 583227 | 11 | Gingera | 583228 |
| 2 | Gangavathi | 583227 | 12 | Toranagallu | 583123 |
| 3 | Sindhanoor | 584128 | 13 | Kampli | 583132 |
| 4 | Karatagi | 583229 | 14 | Sandur | 583119 |
| 5 | Kushtagi | 583227 | 15 | Bellary | 583101 |
| 6 | Ilkal | 587125 | 16 | Hampi-Kamalapur | 583239 |
| 7 | Yelburga | 583236 | 17 | Sirguppa | 583121 |
| 8 | Kuknoor | 583232 | 18 | H.B.Halli | 583212 |
| 9 | Tavargera | 583279 | 19 | Kudligi | 583135 |
| 10 | Sri Ramnagar | 583282 | 20 | Huvinahadgali | 583219 |

To know about the Company, the Business and your assocation with us and Your investment in various Pin codes listed above, Please attend our Up coming Business opportunity meeting at HOSPET - Post -583201 ( Vijayanagar Dist)

Enroll yourself with us on
Wattsup No.9590556566 or
Call. Mob.9590556566
for initial details, with your profile

Date of Meeting shall be shared once your registration is complete on our Wattsup number

## ವಚನ ಅರಿವು

### ಶರಣರ ಸಂಗ ಮೊದಲು

**ಮಡಕೆಯ ಮಾಡುವಡೆ ಮಣ್ಣೆ ಮೊದಲು,**
**ತೊಡಿಗೆಯ ಮಾಡುವಡೆ ಹೊನ್ನೆ ಮೊದಲು,**
**ಶಿವಪಥವನರಿವಡೆ ಗುರುಪಥವೆ ಮೊದಲು.**
**ಕೂಡಲಸಂಗಮದೇವರನರಿವಡೆ**
**ಶರಣರ ಸಂಗವೆ ಮೊದಲು.**


**– ಬಸವಣ್ಣ**

ಗಡಿಗೆಯನ್ನು ತಯಾರಿಸಲು ಮಣ್ಣುಬೇಕು. ಆಭರಣಗಳನ್ನು ಮಾಡಲು ಬಂಗಾರವು ಬೇಕೆ ಬೇಕು. ಹಾಗೆಯೇ ಶಿವಪಥ ಅಂದರೆ ಶಿವಜ್ಞಾನದ ಅರಿವು, ಇಷ್ಟಲಿಂಗದ ಅರಿವು ಬರಬೇಕೆಂದರೆ ಶರಣರು ಸಾರಿದ ತತ್ತ್ವ, ತಿಳುವಳಿಕೆಯನ್ನು, ಅರಿವಿನ ಮಾರ್ಗವನ್ನು ತೋರಿಸುವ ಗುರುವು ಅಥವಾ ಗುರುವಾಗಿ ಕೈ ಹಿಡಿದು ನಡೆಸಬಲ್ಲ ತಿಳುವಳಿಕೆಯಾಗಿದೆ. ಅದು ಶರಣರ ವಚನಗಳಿಂದ ಲಭಿಸುತ್ತದೆ. ಶರಣರ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬದುಕುತ್ತಿರುವವರೆ ಗುರುಗಳಾಗಿದ್ದಾರೆ. ಅಂತಹವರಿಂದ ವಚನತತ್ವ ಪಡೆದು, ಲಿಂಗನಿಷ್ಠರಾಗಿ, ನೈತಿಕ ಮಾರ್ಗ ಅನುಸರಿಸಿ ಜೀವನ ದರ್ಶನ ಪಡೆದು ಬದುಕಬೇಕು. ಶಿವನ ಅರಿವು ಲಭಿಸುತ್ತದೆ. ತನ್ನ ತಾನು ತಿಳಿಯಲು ಸಂಪೂರ್ಣ ಸಿದ್ಧವಾದ ಮಡಕೆಯಂತೆ, ಬಂಗಾರದಂತೆ ಆಗಲು ಗುರು ನೀಡಿದ ವಚನ ಸಂಸ್ಕಾರದಿಂದ ಸಾಧ್ಯವಾಗುತ್ತದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

### ದುಡಿಮೆ



■ **ಸುವರ್ಣಾ ಭಟ್ಟ**

ಜೀವನದಲ್ಲಿ ಕಷ್ಟ ಪಟ್ಟು ದುಡಿದರೆ ಸುಖದ ಜೀವನ ನಡೆಸಬಹುದು. ಸೋಮಾರಿ ಆದರೆ ಬದುಕು ನಡೆಸುವುದು ಕಷ್ಟ.

ರಾಜು ಕಲಿಕೆಯಲ್ಲೂ ಜಾಣನಲ್ಲ ಹಾಗೆಯೇ ಎಲ್ಲ ವಿಷಯದಲ್ಲೂ ಶುದ್ಧ ಸೊಂಬೇರಿ ಹಾಗೂ ಕೆಲಸವು ಕೂಡ ನಿಧಾನ. ತಂದೆ ಅಥವಾ ತಾಯಿ ಆತನ ಜೊತೆಗೆ ಇದ್ದು ಪದೇ ಪದೇ ಹೇಳಿ ಹೇಳಿ ಮಾಡಿಸಬೇಕಿತ್ತು. ರಾಜುವಿನ ತಂದೆ ಹೊಲದಲ್ಲಿ ಕಷ್ಟ ಪಟ್ಟು ದುಡಿದು ಹೆಂಡತಿ, ಮಗನನ್ನು ಸಾಕುತ್ತಿದ್ದರು. ರಾಜು ಶಾಲೆಗೆ ಹೋದ ನಂತರ ತಾಯಿ ಶಾಂತವ್ವ ಹೊಲಕ್ಕೆ ಬಂದು ಗಂಡನಿಗೆ ಸಣ್ಣ ಪುಟ್ಟ ಸಹಾಯ ಮಾಡುತ್ತಿದ್ದಳು. ಶಾಲೆಯಲ್ಲಿಯೂ ರಾಜು ಅಷ್ಟೇ ! ಯಾರದೋ ಉಪಕಾರಕ್ಕೆ ತಾನು ಓದುತ್ತಿದ್ದೇನೇನೋ ಅನ್ನುವಂತೆ ನಡೆದುಕೊಳ್ಳುತ್ತಿದ್ದ. ಗುರುಗಳು ಎಷ್ಟೊಂದು ಸಲ ಬುದ್ಧಿ ಹೇಳಿ ಸುಮ್ಮನಾಗುತ್ತಿದ್ದರು. ಎಷ್ಟು ಹೇಳಿದರೂ ನಾಯಿ ಬಾಲ ಡೊಂಕ ಅನ್ನುವ ರೀತಿಯಲ್ಲಿರುತ್ತಿದ್ದ ರಾಜು. ಹಾಗೋ ಹೀಗೋ ಓದಿ ತರಗತಿಯಲ್ಲಿ ಉತ್ತೀರ್ಣನಾಗುತ್ತಿದ್ದ. ದಿನ ಕಳೆದಂತೆ ಬೆಳೆದು ದೊಡ್ಡವನಾದ. ಹೇಗೋ ಹತ್ತನೇ ತರಗತಿ ಮುಗಿಸಿ ಓದಿಗೆ ವಿದಾಯ ಹೇಳಿದ. ರಾಜುವಿನ ತಂದೆ ರಾಮು' ಮಗನೇ ಮುಂದೆ ಓದಪ್ಪ' ಅಂದರು. ತಂದೆಯ ಯಾವ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಉಂಡಾಡಿ ಗುಂಡನಂತೆ ಊರೆಲ್ಲ ಸುತ್ತುತ್ತಿದ್ದ. ಊಟದ ಸಮಯಕ್ಕೆ ಸರಿಯಾಗಿ ತಟ್ಟೆಯ ಮುಂದೆ ಬಂದು ಕುಳಿತು ಅಮ್ಮಾ!.....ಅಮ್ಮಾ!... ಹಸಿವು ತಾಳಲಾರೆ ಊಟ ನೀಡು ಎನ್ನುತ್ತಿದ್ದ. ಶಾಂತವ್ವನಿಗೆ ಮಗನ ವರ್ತನೆ ಹಿಡಿಸುತ್ತಿರಲಿಲ್ಲ. ಆದರೆ ಏನು ಮಾಡುವುದು ಎಷ್ಟೇಂದರೂ ತಾಯಿ ಕರಳು ಅಲ್ವಾ! ಹಾಗಾಗಿ ಮಗನಿಗೆ ಉಣಬಡಿಸುತ್ತಿದ್ದರು. ತಿಂದ ನಂತರ ತಟ್ಟೆಯನ್ನು ತೊಳೆಯುವ ಪದ್ಧತಿಯು ರೂಢಿಸಿಕೊಂಡಿರಲಿಲ್ಲ.ಮಗನ ಈ ಕೆಟ್ಟ ಅಭ್ಯಾಸವನ್ನು ಕಂಡ ರಾಮು ಕೆಂಡಮಂಡಲವಾದರು. ಕೋಪದಿಂದ ಶಾಂತ.. ಶಾಂತ... ಅಡಿಗೆ ಮನೆಯಿಂದ ಹೊರಬಂದ ಶಾಂತವ್ವ ಏನ್ರೀ.. ಎಂದಳು. ಸರಿಯಾಗಿ ಕೇಳಿಸಿಕೊ ಇನ್ಮುಂದೆ ನಿನ್ನ ಮಗನಿಗೆ ಬಿಟ್ಟಿ ಊಟ ಹಾಕಲು ನನ್ನಿಂದ ಸಾಧ್ಯವಿಲ್ಲ. ಹೊಲದಲ್ಲಿ ಕಷ್ಟ ಪಟ್ಟು ದುಡಿದು ನನಗೂ ಈ ಮನೆಗೂ ಹೆಗಲಾದರೆ ಸರಿ ಇಲ್ಲದಿದ್ದರೆ ಅವನಿಗೆ ಈ ಮನೆಯಲ್ಲಿ ಜಾಗವಿಲ್ಲ. "ಕೈ ಕೆಸರಾದರೆ ಬಾಯಿ ಮೊಸರು". ನಾವು ಕಷ್ಟ ಪಟ್ಟು ದುಡಿದಾಗ ಮಾತ್ರ ಹೊಟ್ಟೆ ತುಂಬ ಊಟ ಮಾಡಲು ಸಾಧ್ಯ. "ಕೈ ಕೆಸರಾಗದೆ ಬರಿ ಬಾಯಿಗೆ ಮೊಸರು ಬೇಕು ಅಂದರೆ ಜೀವನ ನಡೆಸುವುದು ಕಷ್ಟ. ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಬೇಕಾದರೆ ಮೊದಲು ನಮ್ಮ ಶ್ರಮವಿರಬೇಕು. ನಮಗೂ ವಯಸ್ಸಾಯಿತು ಇನ್ನೇಷ್ಟು ವರ್ಷ ದುಡಿದು ಸಾಕಬೇಕು ಇವನನ್ನು. ವಿದ್ಯೆಯು ತಲೆಗೆ ಹತ್ತಲಿಲ್ಲ.ಇದ್ದ ಒಂದು ತುಂಡು ಭೂಮಿಯನ್ನಾದರು ಸರಿಯಾಗಿ ಬಳಸಿಕೊಂಡು ಜೀವನ ನಡೆಸಲು ತಿಳಿಸು ಎಂದು ಹೆಂಡತಿಗೆ ಹೇಳಿ ಹೊರನಡೆದನು ರಾಮು.



ಅಲ್ಲೇ ನಿಂತು ಇದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದ ರಾಜು ಓಡಿ ಬಂದು ತಂದೆಯ ಕಾಲನ್ನು ಹಿಡಿದು ನನ್ನಿಂದ ತಪ್ಪಾಯಿತು ಅಪ್ಪಾ!. ನನಗೆ ಇದೆಲ್ಲ ತಿಳಿದೆ ಇರಲಿಲ್ಲ ನಾನು ನಿನಗೆ ಹೆಗಲಾಗುವೆ ಎಂದನು. ರಾಮು ಮತ್ತು ಶಾಂತವ್ವ ಮಗನನ್ನು ಅಪ್ಪಿಕೊಂಡರು. ರಾಜು ತಂದೆಗೆ ಕೊಟ್ಟ ಮಾತಿನಂತೆ ಹೊಲದಲ್ಲಿ ಕಷ್ಟ ಪಟ್ಟು ದುಡಿದು ಊರಿನ ಜನರೆಲ್ಲ ಆತನನ್ನು ಹಾಡಿ ಹೊಗಳಿ ಕೊಂಡಾಡುವಂತೆ ಉತ್ತಮ ಬೆಳೆ ಬೆಳೆದನು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com M: 9448633038

# ಮಕ್ಕಳ ಜೀವ, ಭಾವಗಳನ್ನು ಅರಳಿಸುವ ಬೇಸಿಗೆ ಶಿಬಿರಗಳು

ಶಾಲೆಯ ಸುದೀರ್ಘ ಮತ್ತು ಏಕತಾನತೆಯ ಕಲಿಕೆಯ ನಂತರದ ಬೇಸಿಗೆ ರಜೆಗಳು ಮಕ್ಕಳ ಪಾಲಿಗೆ ಚೇತೋಹಾರಿಯಾಗಿರುತ್ತವೆ. ಹಿಂದೆಲ್ಲಾ ಅವಿಭಕ್ತ ಕುಟುಂಬಗಳು ಇದ್ದು ಮಕ್ಕಳು ರಜೆ ಬಿಡುತ್ತಿದ್ದಂತೆಯೇ ಸಂಬಂಧಿಗಳ ಮನೆಗೆ ಹೋಗುತ್ತಿದ್ದರು. ಆದರೆ ಇಂದು ಬಹಳವೆಂದರೆ 2 ರಿಂದ 3 ದಿನಗಳವರೆಗೆ ಮಾತ್ರ ಸಂಬಂಧಿಗಳ ಮನೆಯಲ್ಲಿ ತಂಗಬಹುದು. ಕನಿಷ್ಠಒಂದುವಾರಪ್ರವಾಸಕಾರ್ಯಕ್ರಮವನ್ನುಹಮ್ಮಿಕೊಳ್ಳಬಹುದು.... ಹಾಗಾದರೆ ಉಳಿದ ದಿನಗಳಲ್ಲಿ ಏನು ಮಾಡಬಹುದು?? ಮಕ್ಕಳು ಮನೆಯಲ್ಲಿಯೇ ಇದ್ದರೆ .... ಆಟವಾಡುತ್ತಾ ಕಾಲ ಕಳೆಯಬಹುದು. ಆಟ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಕಾರಣ ನಿಜ. ಬೆಳಗಿನ ಜಾವ ಇಲ್ಲವೇ ಸಂಜೆಯ ಸಮಯ ಆಟ ಆಡಲು ಪ್ರಶಸ್ತವಾದರೂ ಬಿರು ಬೇಸಿಗೆಯ ಈ ದಿನಗಳಲ್ಲಿ ಮಕ್ಕಳು ಹೊರಾಂಗಣ ಕ್ರೀಡೆಗಳಿಗೆ ತಮ್ಮನ್ನು ತಾವು ಒಡ್ಡಿಕೊಳ್ಳಲು ಪಾಲಕರು ಬಿಡುವುದಿಲ್ಲ. ಅತಿ ಬಿಸಿಲಿನಿಂದಾಗುವ ಸುಸ್ತು, ಆಯಾಸ, ಬಳಲಿಕೆ, ತಲೆನೋವು ಮತ್ತು ಡಿಹೈಡ್ರೇಶನ್ ನಿಂದ ಮಕ್ಕಳು ನರಳುತ್ತಾರೆ. ಅತಿಯಾದ ಬಿಸಿಲು ಸನ್ ಸ್ಟ್ರೋಕ್ ಗೆ ಕೂಡ ಕಾರಣವಾಗುತ್ತದೆ. ಇನ್ನು ಮನೆಯ ಒಳಾಂಗಣ ಕ್ರೀಡೆಗಳಲ್ಲಿ ತೊಡಗಿಕೊಳ್ಳಲಿ ಎನ್ನುವುದಾದರೆ ಅದಕ್ಕೆ ಪೂರಕ ವಾತಾವರಣ ಮನೆಗಳಲ್ಲಿ ಇಲ್ಲ. ವಿಭಕ್ತ ಕುಟುಂಬದ ಒಂದೋ ಎರಡೋ ಮಕ್ಕಳಿರುವ ಮನೆಗಳಲ್ಲಿ ಪಾಲಕರು ಸದಾ ತಮ್ಮ ಕಾರ್ಯ ಚಟುವಟಿಕೆಗಳತ್ತ ಲಕ್ಷವಿಡಲಿ ಎಂಬ ಅಟೆನ್ಶನ್ ಸೀಕಿಂಗ್ ಸ್ವಭಾವದ ಮಕ್ಕಳ ಕಾರಣದಿಂದ ಪಾಲಕರು ಬೇಸತ್ತು ಬೇಸಿಗೆ ಶಿಬಿರಗಳತ್ತ ಮುಖ ಮಾಡುತ್ತಾರೆ.

ಇತ್ತೀಚೆಗೆ ಬೇಸಿಗೆ ಶಿಬಿರಗಳು ಅತ್ಯಂತ ಅವಶ್ಯಕ ಮತ್ತು ಅನಿವಾರ್ಯ. ಈ ಬೇಸಿಗೆ ಶಿಬಿರಗಳಲ್ಲಿ ಪಠ್ಯೇತರ ಚಟುವಟಿಕೆಗಳಾದ ಹಾಡು, ನೃತ್ಯ, ನಾಟಕ, ಪೇಪರ್ ಕ್ರಾಫ್ಟ್ ಯೋಗ,ಮಂಡಲ ಆರ್ಟ್ ಮುಂತಾದ ಚಟುವಟಿಕೆಗಳನ್ನು ಮಾಡಿಸಿದರೆ ಇನ್ನು ಕೆಲವು ಸಂಸ್ಥೆಗಳು ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಸಹಾಯಕವಾಗುವ ವೇದಗಣಿತ, ಅಬಾಕಸ್, ಸ್ಪೀಡ್ ಮ್ಯಾಥಮ್ಯಾಟಿಕ್ಸ್, ರೋಬೋಟಿಕ್ಸ್ ನಂತಹ ವಿಷಯಗಳನ್ನು ಕಲಿಸುತ್ತಾರೆ. ಇನ್ನೂ ಹಲವೆಡೆ ಕಂಪ್ಯೂಟರ್ ಬೇಸಿಕ್ ತರಗತಿಗಳನ್ನು ನಡೆಸಿದರೆ ಮತ್ತೆ ಕೆಲವೆಡೆ ಸಂಪೂರ್ಣ ರಂಗ ಚಟುವಟಿಕೆಗಳನ್ನು ನಡೆಸುತ್ತಾರೆ. ಮಹಾನಗರಗಳಲ್ಲಿ ಈಜು ತರಬೇತಿ, ವಿವಿಧ ಬಗೆಯ ಆಟಗಳ ತರಬೇತಿಗಳು ಕೂಡ ಒಳಾಂಗಣ ಕ್ರೀಡಾಂಗಣಗಳಲ್ಲಿ ನಡೆಯುತ್ತವೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಇನ್ನೂ ಹಲವೆಡೆ ಮಕ್ಕಳ ಶಾಲಾ ಪಠ್ಯಕ್ರಮದ ತರಬೇತಿಗಳನ್ನು ನೀಡಲಾಗುತ್ತದೆ. ವರ್ಷವಿಡೀ ಕಲಿಯಬೇಕಾದ ಪಠ್ಯಕ್ರಮವನ್ನು ಕೇವಲ ಎರಡು ತಿಂಗಳಿನಲ್ಲಿ ಕಲಿಸುವ ಕುರಿತು ಶಿಕ್ಷಣ ತಜ್ಞರ ಮತ್ತು ಬುದ್ಧಿಜೀವಿಗಳ ವಿರೋಧ ಇದ್ದರು ಹೆಚ್ಚಾಗಿ ಪಾಲಕರು ಈ ಶಿಬಿರಗಳಿಗೆ ಮಕ್ಕಳನ್ನು ದಾಖಲು ಮಾಡುತ್ತಾರೆ. ಎಷ್ಟೋ ಬಾರಿ ಮಕ್ಕಳಿಗೆ ಒತ್ತಕ್ಷರಗಳು, ಮಗ್ಗಿಗಳು, ಪದಗಳನ್ನು ಜೋಡಿಸಿ ಓದುವುದು, ಬರೆಯುವುದು ಮುಂತಾದ ಮೂಲಭೂತ ಕಲಿಕೆಯ ಅಂಶಗಳ ಅರಿವು ಮೂಡಿಸುವ ಕೆಲಸವನ್ನು ಈ ಬೇಸಿಗೆ ಶಿಬಿರಗಳು ಮಾಡುತ್ತವೆ. ಇದು ಅವರಿಗೆ ಅನಿವಾರ್ಯವೂ ಕೂಡ. ನೀರಿಳಿಯದ ಗಂಟಲಿನಲ್ಲಿ ಕಡುಬನ್ನು ತುರುಕಲು ಸಾಧ್ಯವಿಲ್ಲ ಅಲ್ಲವೇ!! ಹಾಗೆಯೇ ಮೂಲಭೂತ ಕಲಿಕೆಯ ಜ್ಞಾನ ಹೊಂದಿರದ ಮಕ್ಕಳಿಗೆ ಶಾಲಾ ಪಠ್ಯಕ್ರಮ ಕಲಿಸುವುದು ಕಷ್ಟದಾಯಕ.



ಆದರೆ ಮಕ್ಕಳ ಹಿತದೃಷ್ಟಿಯಿಂದ ಸಂಪೂರ್ಣ ಎರಡು ತಿಂಗಳ ಬೇಸಿಗೆ ಶಿಬಿರವನ್ನು ನಡೆಸಬಾರದು. ಮಕ್ಕಳು ಕೆಲ ದಿನಗಳ ಮಟ್ಟಿಗಾದರೂ ಸಂಬಂಧಿಗಳ ಮನೆಗೆ ಭೇಟಿ ಕೊಡಬೇಕು ಮತ್ತು ಪಾಲಕರೊಂದಿಗೆ ಪ್ರವಾಸ ಕೈಗೊಳ್ಳಬೇಕು. ಹೀಗೆ ಮಾಡುವುದರಿಂದ ಮಗು ಸಮಾಜ ಜೀವಿಯಾಗಿ ಬೆಳೆಯುತ್ತದಲ್ಲದೆ ಪ್ರವಾಸ ಮಗುವಿನ ಬೌದ್ಧಿಕ ವಿಕಾಸಕ್ಕೆ ಕಾರಣವಾಗುತ್ತದೆ.

ಬೇಸಿಗೆ ಶಿಬಿರದ ತರಬೇತಿಯಿಂದ ಮಕ್ಕಳಿಗಾಗುವ ಲಾಭಗಳು ಹೀಗಿವೆ.

1. ಮಕ್ಕಳು ಮನೆಯಿಂದ ಹೊರಗೆ ಶಾಲೆಯಿಂದ ಹೊರತಾದ ಪರಿಸರದಲ್ಲಿ ವೈವಿಧ್ಯಮಯ ವಿಷಯಗಳನ್ನು ಕಲಿಯುತ್ತಾರೆ.
2. ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಯು ಮುಖ್ಯ ಎಂಬುದನ್ನು ಅರಿತು ಬುದ್ಧಿ ಭಾವಗಳ ಅರಳುವಿಕೆಗೆ ಸಹಕಾರಿಯಾಗುವ ಕಲೆಗಳನ್ನು ತಮ್ಮದಾಗಿಸಿಕೊಳ್ಳುತ್ತಾರೆ.
3. ಪ್ರದರ್ಶನ ಕಲೆಗಳಾದ ಹಾಡುಗಾರಿಕೆ, ನೃತ್ಯ, ನಾಟಕ, ಕುಸುರಿ ಕಲೆಯಂತಹ ವಿದ್ಯೆಗಳು ಮಕ್ಕಳಲ್ಲಿನ ಆಸಕ್ತಿಯನ್ನು ಹೆಚ್ಚಿಸುವುದು. ನವರಸಗಳ ಭಾವಾಭಿವ್ಯಕ್ತಿಯ ಮೂಲಕ ಮಕ್ಕಳು ಹೊರ ಹಾಕುತ್ತಾರೆ.
4. ಶಾಲೆಯ ಏಕತಾನತೆಯಿಂದ ಹೊರಬಂದು ಸಮಯದ ಪರಿಮಿತಿ ಇಲ್ಲದೆ ಗುಂಪು ಚಟುವಟಿಕೆಗಳಲ್ಲಿ ತೊಡಗುವುದು ಮಕ್ಕಳಲ್ಲಿ ಸಹಕಾರ ಮತ್ತು ಹೊಂದಾಣಿಕೆ ಮನೋಭಾವ ಬೆಳೆಸುತ್ತದೆ.
5. ಮನೆಯ ಒಳಗೆ ಟಿವಿ ನೋಡುತ್ತಾ ಮೊಬೈಲ್ ನಲ್ಲಿ ಆಟವಾಡುತ್ತಾ, ಕಾಲ ಹರಣ ಮಾಡುವ, ವಿಡಿಯೋ ಗೇಮ್ ನಲ್ಲಿ ಜಗಳವಾಡುವ ಮಕ್ಕಳು ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸಿ, ಕಲಿಕೆಯ ಇನ್ನೊಂದು ಆಯಾಮವನ್ನು ತಮ್ಮದಾಗಿಸಿಕೊಳ್ಳುತ್ತಾರೆ.

ಮನೆಯಲ್ಲಿ ಇದ್ದು ಟಿವಿ ರಿಮೋಟ್ ಗಾಗಿ ಹೊಡೆದಾಡುವ, ವಿಡಿಯೋಗೇಮ್ ಆಡುತ್ತಾ ಹೊಡಿ, ಬಡಿ, ಕೊಲ್ಲು ಎಂದು ಕಿರುಚುತ್ತಾ ಮಾತು ಮಾತಿಗೆ ತಂದೆ ತಾಯಿಯ ಬಳಿ ಚಾಡಿ ಹೇಳಲು ಧಾವಿಸುವ ಮಕ್ಕಳನ್ನು ಸೂಕ್ತವೆನಿಸುವ ಬೇಸಿಗೆ ಶಿಬಿರಗಳಿಗೆ ದಾಖಲು ಮಾಡಿ ಮಕ್ಕಳ ಬಾಲ್ಯ ವಿಕಸಿತಗೊಳಿಸಿ ಮಕ್ಕಳ ಸರ್ವಾ0ಗೀಣ ಅಭಿವೃದ್ಧಿಗೆ ಬುನಾದಿ ಹಾಕಿ ಮತ್ತು ನಿಮ್ಮ ಮನಃಶಾಂತಿಯನ್ನು ಕಾಯ್ದುಕೊಳ್ಳಿ(ಅದೂ ಕೂಡಾ ಮುಖ್ಯ)

# ಅತ್ತ ಕಡೆಯಿಂದ ನೋ ರೆಸ್ಪಾನ್ಸ್...

ರೇಲ್ವೆ ಸ್ಟೇಶನ್ ನಲ್ಲಿ ಅತ ಯಾರಿಗಾಗಿಯೋ ಕಾಯುತ್ತಿದ್ದ.. ಸುಮಾರು ನಾಲ್ಕು ತಾಸುಗಳಿಂದ ಯಾರಿಗಾಗಿಯೋ ಕಾದು ಕುಳಿತಿದ್ದಾನೆ. ಆತನ ಮುಖದಲ್ಲಿ ಯಾವುದೋ ಆತಂಕ ಮನೆ ಮಾಡಿದೆ.. ಮೊಬೈಲ್ ತೆಗೆದು ಯಾರಿಗೋ ರಿಂಗ್ ಮಾಡಿದ..ಅವರು ಫೋನ್ ರಿಸೀವ್ ಮಾಡುತ್ತಿಲ್ಲ. ಹೀಗೆ ಹತ್ತಾರು ಬಾರಿ ಕಾಲ್ ಮಾಡಿದರೂ ಅವರು ಫೋನ್ ತೆಗೆಯುತ್ತಿಲ್ಲ.. ಆತ ಬೇಸರಪಟ್ಟುಕೊಂಡಿದ್ದ.ಆದರೂ ತನ್ನ ಪ್ರಯತ್ನ ಮುಂದುವರೆಸಿದ್ದ.. ಅತ್ತ ಕಡೆಯಿಂದ ನೋ ರೆಸ್ಪಾನ್ಸ್... ರಾತ್ರಿ ಹನ್ನೊಂದು ಮೂವತ್ತಕ್ಕೆ ಇಲ್ಲಿ ಆ ರೈಲು ಬಂದು ಇದೇ ಪ್ಲಾಟ್ ಫಾರಂ ನಲ್ಲಿ ನಿಲ್ಲುತ್ತದೆ..ಆತ ಆ ರೈಲಿಗೆ ಬರುತ್ತೇನೆಂದು ಹೇಳಿದ್ದ...ಮಾತು ತಪ್ಪುವ ಮನುಷ್ಯ ಆತನಲ್ಲ.. ಹೇಳಿದ ಮೇಲೆ ಬಂದೇ ಬರುತ್ತಾನೆ.. ಮಲಗಿರಬಹುದು ಅದಕ್ಕೆ ಫೋನ್ ತೆಗೀತಿಲ್ಲ ಅಂದುಕೊಂಡು ಸ್ಟೇಶನ್ ನಲ್ಲಿನ ಸಿಮೆಂಟ್ ಬೆಂಚ್ ನಲ್ಲಿ ಕುಳಿತುಕೊಂಡ..



ಮಹಿಮ
ಲೇಖಕರು, ರಾಯಚೂರು

Scan For Digital Colourful
HAMPI TIMES E-paper

ತಾನು ಹಾಗೂ ರೈಲಿನಲ್ಲಿ ಬರುವ ವ್ಯಕ್ತಿ ಕಂಠಸ್ಯ ಗಳಸ್ಯ.. ಅದಕ್ಕೆ ತಾನೆ ಬೇನಾಮಿ ಆಸ್ತಿಯನ್ನು ಅವನ ಹೆಸರಿನಲ್ಲಿ ತಾನು ಮಾಡಿದ್ದು.. ಹೀಗೆ ಹತ್ತಾರು ಜನಕ್ಕೆ ಮಾಡಿಸಿದ ಬೇನಾಮಿ ಆಸ್ತಿ ನಾನಾ ಮೂಲಗಳ ಅಕ್ರಮ ಸಂಪಾದನೆ.. ಈಗ ಬೇನಾಮಿ ಆಸ್ತಿಗಳನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಳ್ಳಬೇಕಿದೆ.. ಈ ಎಲ್ಲಾ ಹತ್ತು ಜನ ತನಗೆ ಪರಮಾಪ್ತರು.ಆದರೆ ಈಗ ಅವರೆಲ್ಲರೂ ನಾಟ್ ರೀಚಬಲ್..ಸಿಕ್ಕ ಇವನೊಬ್ಬ ಆಸ್ತಿಯನ್ನು ವಾಪಸ್ ಮಾಡಲು ಒಪ್ಪಿದ್ದಾನೆ.. ಸಮಯ ಹನ್ನೊಂದು. ಇನ್ನು ಮೂವತ್ತು ನಿಮಿಷಗಳು.. ಇನ್ನೇನು ಬಂದೇಬಿಡುತ್ತಾನೆ..



ಆತ ಸಿಮೆಂಟ್ ಬೆಂಚ್ ಮೇಲಿಂದ ಎದ್ದು ಆಚೀಚೆ ಅಡ್ಡಾಡತೊಡಗಿದ..

ಎದುರಿಗೆ ಬಂದ ಓರ್ವ ವ್ಯಕ್ತಿ ಆತನನ್ನು ನೋಡಿ ನಕ್ಕ.. ಯಾರೋ ಪರಿಚಯದವನಿರಬೇಕು..ಈತನೂ ಮುಗುಳ್ನಕ್ಕ. "ನೀವು ರವಿಯವರು ಅಲ್ವಾ"ಮಾತಿಗಿಳಿದ..

"ಹೌದು, ನಿಮ್ಮ ಗುರುತು ಹತ್ತಲಿಲ್ಲ"

"ನಿಮ್ಮ ಫ್ರೆಂಡ್ ಜೋಸೆಫ್ ನ ಅಳಿಯ ಸುಂದರ್"

"ಯಾವ ಜೋಸೆಫ್?ಅಂತಹವರು ಯಾರೂ ನನ್ನಗೆಳೆಯರಿಲ್ಲವಲ್ಲ"

"ಇದಾರೆ, ನೀವು ಮರೆತಿದ್ದೀರಿ ಏಜ್ ಪ್ರಾಬ್ಲಮ್, ಬನ್ನಿ ಚಹಾ ಕುಡಿಯೋಣ, ಅದೇನು ನೀವಿಲ್ಲಿ"

"ನನಗೆ ಮರೆವಿನ ಕಾಯಿಲೆ ಇಲ್ಲ.. ಜೋಸೆಫ್ ಅನ್ನುವ ಯಾವ ಸ್ನೇಹಿತರೂ ನನಗಿಲ್ಲ.."

"ಹೋಗ್ಲಿ ಬಿಡಿ, ನೀವು ರವಿಯವರು ತಾನೆ"

"ಹೌದು ನಾನು ರವಿ.. ನೀವು ಯಾರು ಎಲ್ಲೋ ನೋಡಿದ ಹಾಗೆ ಇದೆ"

" ನಾನು ಸುಂದರ್, ಜೋಸೆಫ್ ಅಳಿಯ .. ಇರ್ಲಿ ಬಿಡಿ.. ನಿಮ್ಮ ಪರಿಚಯ ನನಗಿದೆ, ನಿಮ್ಮ ಮನೆ ಐಶ್ವರ್ಯ ಕಾಲನಿ.. ನಿಮ್ಮ ಮಗ ಶಂಕರ್, ಮಗಳು ಪೂರ್ವಿ"

"ಹೋ..ಎಲ್ಲಾ ಹೇಳಿಬಿಟ್ಟಿರಿ.. ಆದರೆ ಜೋಸೆಫ್ ಯಾರೋ ನೆನಪಾಗುತ್ತಿಲ್ಲ"

"ಹೋಗ್ಲಿ ಬಿಡಿ ಸಾರ್. ಜೋಸೆಫ್ ಈಜ್ ನೋ ಮೋರ್.. ಅವರೇ ಇಲ್ಲ ಅಂದ ಮೇಲೆ ಅವರ ಸುದ್ದಿ ಯಾಕೆ"

ಅಷ್ಟರಲ್ಲಿ ರೇಲ್ವೆ ನಿಲ್ದಾಣದ ಉದ್ಘೋಷಕಿ ರೈಲು ಇನ್ನು ಒಂದು ತಾಸು ತಡವಾಗಿ ಬರಲಿದೆ ಎಂದು ಸೂಚನೆ ನೀಡಿದಳು..

"ನೋಡಿ ಸಾರ್ ಈ ರೈಲುಗಳೇ ಹಾಗೆ.. ಹೆಂಗೋ ಒಂದು ತಾಸು ಲೇಟ್ ಬನ್ನಿ ಚಹಾ ಕುಡಿಯುವ"

"ಬೇಡ. ಚಹಾ ಬೇಡ.."

"ಸಿಗರೇಟ್'

" ಹಾಂ ನಡೆಯುತ್ತದೆ"

ಇಬ್ಬರೂ ಸಿಗರೇಟ್ ಸೇದುತ್ತಾ ಹಾಗೆ ಪ್ಲಾಟ್ ಫಾರಂ ಮೇಲೆ ವಾಕ್ ಮಾಡತೊಡಗಿದರು..

"ಬನ್ನಿ ಸಾರ್, ಹಂಗೇ ಲಾಂಗ್ ವಾಕ್ ಹೋಗೋಣ..ನಾನು ಸಹ ಇದೇ ರೈಲಿನಲ್ಲಿ ಬರುವ ನಮ್ಮ ಸಂಬಂಧಿಗಾಗಿ ನಿರೀಕ್ಷಿಸುತ್ರಿದ್ದೇನೆ"

"ಮುಂದೆ ಬಹಳ ಕತ್ತಲು ಇದೆ"..

" ಕತ್ತಲಿಗೆ ಹೆದರ್ತೀರಲ್ಲ ಸಾರ್"

"ಹಾಗೇನಿಲ್ಲ.

"ಇರ್ಲಿ ಬನ್ನಿ ಸಾರ್..ಕಾದು ಕಾದು ಬೋರ್ ಆಗಿದೆ.."

"ಹಾಗೆ ಹೋಗಿ ಬೇಗ ಬಂದುಬಿಡೋಣ ಸುಂದರ್"


ಇಬ್ಬರೂ ಮುಂದೆ ಮುಂದೆ ಸಾಗಿದರು..

ಸುಂದರ್ ಮತ್ತೊಂದು ಸಿಗಾರ್ ಅವರಿಗೆ ನೀಡಿದ..ಕತ್ತಲಿನಲ್ಲಿ ಸ್ವಲ್ಪ ದೂರ ಸಾಗಿದ್ದರು.. ರವಿ ಮೂರು ಬಾರಿ ದಂ ಎಳೆದರು.. ತಲೆ ತಿರುಗಿದಂತಾಗಿ ನೆಲದ ಮೇಲೆ ಕುಸಿದರು.. ಎರಡನೇ ಬಾರಿ ಸುಂದರ್ ನೀಡಿದ ನಕಲಿ ಸಿಗಾರ್ ನ ಪ್ರಭಾವ..

ಸುಂದರ್ ಯಾರಿಗೋ ಫೋನ್ ಮಾಡಿದ.. ಮೂವರು ಬಂದರು.. ಎಚ್ಚರ ತಪ್ಪಿದ್ದ ರವಿಯನ್ನು ಎತ್ತಿ ಟ್ರ್ಯಾಕ್ ಮೇಲೆ ಎಸೆದರು... ಅತ್ತ ಕಡೆಯಿಂದ ಗೂಡ್ಸ್ ಗಾಡಿ ರಭಸದಿಂದ ಬಂದು ರವಿಯ ದೇಹವನ್ನು ಛಿದ್ರಛಿದ್ರಗೊಳಿಸಿತು.. ಸ್ನೇಹಿತ ಬರಬೇಕಿದ್ದ ರೈಲು ಗಾಡಿ ಬಂದಿತು.. ರವಿಯ ಸ್ನೇಹಿತ ಬರಲಿಲ್ಲ.. ತನ್ನ ಬದಲಿಗೆ ಆತ ಸುಂದರ್ ನನ್ನು ಕಳಿಸಿಕೊಟ್ಟಿದ್ದ...

**ಕವಿ ಮನಸು**

## ತಂಪೆರೆದ ಮಳೆ




ಬಿಸಿಲಿನ ಬೇಗೆಗೆ ಬಸವಳಿದೀಜಗ
ಕಸಿವಿಸಿಗೊಳ್ಳುತ ಕುಳಿತಿರಲು
ನಸುಕಲಿ ಬಿರಿದಿಹ ಕುಸುಮವು ಮುದುಡಿದೆ
ವಸುಧೆಯು ದಾಹದೆ ನೊಂದಿರಲು

ಮುತ್ತಿದ ಬೇಸಿಗೆ ಕುತ್ತನು ತಂದಿದೆ
ಕತ್ತಲಿನಲ್ಲಿದೆ ಧರೆ ಜೀವಿ
ಶಿಸ್ತನು ಕಾಯದೆ ಹೊತ್ತಿಗೆ ಸುರಿಯದೆ
ಬತ್ತಿದೆ ಸುತ್ತಲ ಕೆರೆ ಬಾವಿ

ಹಕ್ಕಿಯು ಕುಳಿತಿದೆ ಕೊಕ್ಕನು ತೆರೆದಿದೆ
ರೆಕ್ಕೆಯು ಸೋತಿದೆ ದಾಹದಲಿ
ದಕ್ಕಿದ ಕಾಳನು ಮುಕ್ಕಲಿಕಾಗದು
ದಕ್ಕದೆ ಜಲಹನಿ ಸನಿಹದಲಿ

ಜಗದಲಿ ಜೀವಿಯ ಮುಗಿಯದ ನೋವಿಗೆ
ಸಿಗುವುದೆ ಶೀಘ್ರದೆ ಪರಿಹಾರ?
ಮುಗಿಲಿದು ಬಂದಿತು ಗಗನದ ಬಯಲಿಗೆ
ಹಗಲಲಿ ಇರುಳಿನ ಅವತಾರ

ತುಂತುರು ಮಳೆಹನಿ ಬಂತದೊ ಭೂಮಿಗೆ
ನಂತರ ಸುರಿಯಿತು ಜೋರಾಗಿ
ತಂತದು ಜೀವಿಗೆ ಸಂತಸ ಸಂಭ್ರಮ
ಚಿಂತೆಯ ಕಳೆಯಿತು ಸೊಗಸಾಗಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ದಾಹ



ಬಿಸಿಲ ಧಗೆಗೆ ದಣಿದೆ
ಬಾಯಾರಿಕೆಯ ದಾಹ ಸಹಿಸದಾದೆ
ಬೊಗಸೆ ನೀರಿಗಾಗಿ ಅಲೆದಾಡಿದೆ
ಕೊಳವೆಬಾವಿ ಒಂದು ಕಾಣಿಸಿದೆ

ನಾಲ್ಕು ಹನಿ ನೀರು ಬೇಕಾಗಿದೆ
ದಾಹ ತೀರಲೆಂದು ಬಾಯಿಯ ತೆರೆದೆ
ನೀರು ಕುಡಿಯುವುದು ಹೇಗೆಂದು
ತಿಳಿಯದಾಗಿದೆ
ಪುಟ್ಟಕಂದ ನಾನು ಗಂಟಲು ಒಣಗಿದೆ

ಸುತ್ತ ಕೆರೆಯ ನೀರಿದೆ
ಬಾಲಕನ ಕೈಗೆ ಎಟುಕದಾಗಿದೆ
ಜೀವವ ಉಳಿಸಿಕೊಳ್ಳಲು ಹೋರಾಟ
ಬದುಕಿನ ನೆಲೆಗಾಗಿ ಪರದಾಟ

ಜಲವೇ ಜೀವ ಮನುಜ ಸಂಕುಲಕೆ
ಜಲ ಇಲ್ಲದೆ ನೀಗುವುದಿಲ್ಲ ಬಾಯಾರಿಕೆ
ಸಂರಕ್ಷಿಸಿ ಜಲವ ಮುಂದಿನ ಪೀಳಿಗೆಗೆ
ಅದುವೇ ನಾವು ಕೊಡುವ ಕೊಡುಗೆ

–ಚೇತನ ಭಾರ್ಗವ

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಕಾಲೇಜು ಲೈಬ್ರರಿ ಎಂಬ ಆಪ್ತಮಿತ್ರ

ಹಿಂಗ ಒಂದಿನ ನಾನು ಮತ್ತು ಗೆಳತ್ಯಾರು ಕ್ಲಾಸು ಇಲ್ಲಾಂತ ಮಾತಾಡ್ತಾ ಕೂತಿದ್ವಿ. ಆಗ ಗೆಳತಿ ಸಿಂಧು 'ನಾವು ಹಿಂಗ ಹಲ್ಟಿ ಹೊಡಿತಾ ಕೂತ್ರೆ ಸುಮ್ನೆ ಟೈಮ್ ವೇಸ್ಟ್ ಆಕ್ಕೈತಿ. ಇದ್ರ ಬದ್ಲಾಗಿ ಒಂದೀಟ ಲೈಬ್ರರಿಗಾದ್ರೂ ಹೋಗಾಣ ಬರ್ರೀ' ಅಂದಳು. ಆಗ ರಕ್ಷಿತ 'ಅಯ್ಯಾ, ಅದೇನು ಯಾವಾಗ ನೋಡಿದ್ರೂ ಲೈಬ್ರರಿ ಲೈಬ್ರರಿ ಅಂತಾ ಇರ್ತೀಯಲ್ಲ, ಅಲ್ಲಿ ಅಂತಾದ್ದೇನಿದೆ' ಎಂದು ಪ್ರಶ್ನಿಸಿದಳು. ನನಗೂ ಬಹಳ ದಿನದಿಂದ ಇಂತದ್ದೊಂದು ಪ್ರಶ್ನೆ ಕಾಡುತ್ತಲೇ ಇತ್ತು. 'ಅಲ್ಲಿ ಜಾದೂ ಏನಾದ್ರೂ ಇದೆಯಾ' ಅಂತ ಕೇಳಿದೆ. ಅದಕ್ಕೆ ಸಿಂಧು 'ಹೌದು ಅಲ್ಲಿ ಜಾದೂ ಇದೆ. ಬರ್ರೀ ತೋರಿಸ್ತೀನಿ' ಅಂತ ನಮ್ಮನ್ನೆಲ್ಲ ಕರೆದೊಯ್ದಳು.

ಲೈಬ್ರರಿಯ ಒಳಗೆ ಕಾಲಿಡುತ್ತಿದ್ದಂತೆ ಏನೋ ಒಂಥರ ವಿನೀತ ಭಾವ ನಮ್ಮನ್ನು ಆವರಿಸಿತು. ಈ ಹಿಂದೆ ಅನೇಕ ಬಾರಿ ಇಲ್ಲಿಗೆ ಬಂದಿದ್ದೆವಾದರೂ ಇಂದೇಕೋ ವಿಶೇಷ ಭಾವ ಆವರಿಸಿತು. ಅಲ್ಲಿನ ಪ್ರಶಾಂತತೆಗೆ ಮಾರುಹೋದೆ. ನಮ್ಮ ಕಾಲೇಜಿನ ಲೈಬ್ರರಿ ಮುಖ್ಯ ರಸ್ತೆಯ ಪಕ್ಕದಲ್ಲೇ ಇದ್ದರೂ ಪ್ರಶಾಂತವಾಗಿತ್ತು. ಹೊರಗಿನ ಗೌಜು ಗದ್ದಲ ಅಲ್ಲಿರಲಿಲ್ಲ. ಒಂದು ಕ್ಷಣ ಇದೊಂದು ನೆಮ್ಮದಿಯ ತಾಣ ಎನ್ನಿಸಿತು. ಟೇಬಲ್ಲುಗಳ ಮೇಲೆ ಹರವಿದ್ದ ನ್ಯೂಸ್ ಪೇಪರ್‌ಗಳು, ಮ್ಯಾಗಜಿನ್‌ಗಳು, ಕರಪತ್ರಗಳು ಎಲ್ಲವೂ ನಮ್ಮನ್ನು ಸ್ವಾಗತಿಸಿದವು. ಕಪಾಟಿನಲ್ಲಿ ಬಂಧಿಯಾಗಿದ್ದ ಪುಸ್ತಕಗಳು ಓದುಗರ ಕೈಸೇರಲು ಹಾತೊರೆಯುತ್ತಿವೆ ಎನ್ನಿಸಿತು. ಹೌದಲ್ಲ! ಇಷ್ಟೊಂದು ಪುಸ್ತಕಗಳು, ಜ್ಞಾನದ ಸಂಪನ್ಮೂಲಗಳು ನಮಗಾಗಿ ಇರುವಾಗ ನಾವೇಕೆ ಇದನ್ನೆಲ್ಲಾ ಮರೆತೆವು ಎನ್ನಿಸಿತು. ಏನಾದರೂ ಆಗಲಿ ಇನ್ನು ಮುಂದೆ ಇಲ್ಲಿನ ಪುಸ್ತಕಗಳನ್ನು ಒಮ್ಮೆಯಾದರೂ ಕೈಯಲ್ಲಿ ಹಿಡಿದು ಅದರೊಳಗಿನ ಜ್ಞಾನವನ್ನು ವರ್ಗಾವಣೆ ಮಾಡಿಕೊಳ್ಳಬೇಕೆಂದು ದೃಢ ನಿಶ್ಚಯ ಮಾಡಿದೆವು ಮತ್ತು ನಮ್ಮನ್ನೆಲ್ಲ ಅಲ್ಲಿಗೆ ಕರೆದುತಂದ ಸಿಂಧುಗೆ ತ್ಯಾಂಕ್ಸ್ ಹೇಳಿದೆವು. ಆನಂತರ ಕಾಲೇಜು ಲೈಬ್ರರಿಯ ಮಹತ್ವವನ್ನು ತಿಳಿದುಕೊಂಡೆ. ಅದನ್ನು ಈಗ ನಿಮ್ಮ ಮುಂದಿಡುತ್ತಿದ್ದೇನೆ.





ಆರ್.ಜಿ. ಲತ ಹೂವಿನಹಡಗಲಿ
ಹವ್ಯಾಸಿ ಬರಹಗಾರ್ತಿ

Scan For Digital Colourful
HAMPI TIMES E-paper

**ಎಷ್ಟೊಂದು ಅನುಕೂಲಗಳು :** ಕಾಲೇಜು ಗ್ರಂಥಾಲಯವು ವಿದ್ಯಾರ್ಥಿಗಳಿಗೆ ಅಮೂಲ್ಯವಾದ ಜ್ಞಾನ ಸಂಪನ್ಮೂಲವಾಗಿದೆ. ಅದರ ಉಪಯೋಗಗಳು ಅನನ್ಯ. ಆದಾಗ್ಯೂ ಕೆಲ ಮಹತ್ವದ ಉಪಯೋಗಗಳು ಕೆಳಗಿನಂತಿವೆ.

**ಶೈಕ್ಷಣಿಕ ಪ್ರಯೋಜನ :** ಕಾಲೇಜು ಗ್ರಂಥಾಲಯವು ನಮ್ಮ ಶೈಕ್ಷಣಿಕ ಮಿತ್ರ ಇದ್ದಂತೆ. ಅಲ್ಲಿನ ಪುಸ್ತಕಗಳು, ನಿಯತಕಾಲಿಕಗಳು, ಶೈಕ್ಷಣಿಕ ಸಾಮಗ್ರಿಗಳು, ನಮ್ಮ ಕಲಿಕಾ ವಿಷಯಗಳ ಸಮಗ್ರ ತಿಳಿವಳಿಕೆಯನ್ನು ನೀಡುತ್ತದೆ ಮತ್ತು ನಮ್ಮ ಅಧ್ಯಯನಕ್ಕೆ ಉತ್ಕೃಷ್ಟವಾದ ಮತ್ತು ಅಗತ್ಯವಿರುವ ಮಾಹಿತಿಯನ್ನು ಹುಡುಕಲು ಸಹಾಯ ಮಾಡುತ್ತದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬಂದ ಮೇಲೆ ಪ್ರತಿ ಕಲಿಕಾಂಶವನ್ನು ವಿಸ್ತೃತವಾಗಿ ಅಧ್ಯಯನ ಮಾಡಲೇಬೇಕಿದೆ. ವಿಸ್ತೃತ ಅಧ್ಯಯನಕ್ಕೆ ಬೇಕಾದ ಸಾಮಗ್ರಿಗಳನ್ನು ಗ್ರಂಥಾಲಯ ಒದಗಿಸುತ್ತದೆ. ಸಿಲಬಸ್‌ಗೆ ನಿಗದಿ ಪಡಿಸಿದ ಎಲ್ಲಾ ಪುಸ್ತಕಗಳು ಲಭ್ಯ ಇಲ್ಲದಿದ್ದಾಗಲೂ ಗ್ರಂಥಾಲಯವು ಆಕರ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳಲು ಸಹಾಯ ಮಾಡುತ್ತದೆ.

**ಭವಿಷ್ಯದ ಬುನಾದಿಗೆ ಅಗತ್ಯ ಸಾಮಗ್ರಿ :** ಪಿ.ಯು.ಸಿ, ಪದವಿ ಅಥವಾ ಸ್ನಾತಕೋತ್ತರ ಪದವಿ ನಂತರ ಉದ್ಯೋಗ ಗಳಿಸಿಲು ಬೇಕಾದ ಸ್ಪರ್ಧಾತ್ಮಕ ಪರೀಕ್ಷಾ ಸಿದ್ಧತೆಗೆ ಅಗತ್ಯ ಸಂಪನ್ಮೂಲ ಸಾಹಿತ್ಯವನ್ನು ಕಾಲೇಜು ಗ್ರಂಥಾಲಯ ಒದಿಸುತ್ತದೆ. ಯು.ಪಿ.ಎಸ್.ಸಿ, ಕೆ.ಪಿ.ಎಸ್.ಸಿ.ಯಂತಹ ಮಹತ್ತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಅಗತ್ಯ ಸಂಪನ್ಮೂಲ ಇಲ್ಲಿ ದೊರೆಯುತ್ತದೆ. ಇದನ್ನು ಬಳಸಿಕೊಂಡು ನಮ್ಮ ಭವಿಷ್ಯದ ಬುನಾದಿಯನ್ನು ಭದ್ರಗೊಳಿಸಿಕೊಳ್ಳಬಹುದು.

**ನಿಶ್ಯಬ್ದ ಅಧ್ಯಯನದ ಸ್ಥಳ :** ಗ್ರಂಥಾಲಯಗಳು ನಿಶ್ಯಬ್ದ ಮತ್ತು ವ್ಯಾಕುಲತೆ ಮುಕ್ತ ವಾತಾವರಣವನ್ನು ಹೊಂದಿರುತ್ತವೆ. ಹಾಗಾಗಿ ಅಲ್ಲಿ ನಾವು ಯಾವುದೇ ಅಡೆತಡೆಗಳಿಲ್ಲದೆ ನಮ್ಮ ಅಧ್ಯಯನಗಳ ಮೇಲೆ ಗಮನ ಕೇಂದ್ರೀಕರಿಸಬಹುದು. ಮನೆ ಅಥವಾ ವಸತಿ ನಿಲಯಗಳಲ್ಲಿ ಸಿಗದಿರುವ ಪ್ರಶಾಂತತೆ ಇಲ್ಲಿರುವುದರಿಂದ ಓದಿನ ಮೇಲೆ ಗಮನ ಕೇಂದ್ರೀಕರಿಸಲು ಇದು ಸಹಾಯಕವಾಗುತ್ತದೆ.

**ವಿಮರ್ಶಾತ್ಮಕ ಚಿಂತನೆಗೆ ರಹದಾರಿ :** ಗ್ರಂಥಾಲಯದಲ್ಲಿನ ಪುಸ್ತಕಗಳು ವೈವಿಧ್ಯಮಯ ಆಗಿರುವುದರಿಂದ ವಿಷಯಕ್ಕೆ ಪೂರಕವಾದ ವಿವಿಧ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುತ್ತದೆ. ಅಲ್ಲಿನ ಪುಸ್ತಕಗಳನ್ನು ಓದುವ ಮೂಲಕ ನಮ್ಮಲ್ಲಿ ವಿಮರ್ಶಾತ್ಮಕ ಚಿಂತನೆಯನ್ನು ಮೂಡುತ್ತದೆ. ಇದು ನಮ್ಮ ಸ್ವಂತ ಸ್ವತಂತ್ರ ಆಲೋಚನಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಹೆಚ್ಚು ಸ್ವಯಂ ಕಲಿಕೆಗೆ ಸಹಾಯ ಮಾಡುತ್ತದೆ.

**ಹಣಕಾಸಿನ ಉಳಿತಾಯ :** ಪಠ್ಯಪುಸ್ತಕಗಳು ಮತ್ತು ಇತರ ಶೈಕ್ಷಣಿಕ ಸಾಮಗ್ರಿಗಳನ್ನು ಹೊಂದಿಸಿಕೊಳ್ಳಲು ಬೇಕಾದ ಹಣವನ್ನು ಗ್ರಂಥಾಲಯಗಳು ಉಳಿಸುತ್ತವೆ. ಇವು ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳ ಪಾಲಿಗೆ ಅತ್ಯಮೂಲ್ಯ ನಿಧಿಗಳಾಗಿವೆ. ಇಲ್ಲಿ ಉಚಿತವಾಗಿ ಪಠ್ಯಪುಸ್ತಕಗಳು ಮತ್ತು ಇತರ ಅಧ್ಯಯನ ಸಾಮಗ್ರಿಗಳನ್ನು ಎರವಲು ಪಡೆದು ಓದಬಹುದು. ಆದ್ದರಿಂದ ಗ್ರಂಥಾಲಯಗಳು ಹಣವನ್ನು ಉಳಿತಾಯ ಮಾಡುತ್ತವೆ.

**ಗ್ರಂಥಾಲಯವನ್ನು ಬಳಸೋಣ :**

- ನಿಗದಿತವಾಗಿ ಗ್ರಂಥಾಲಯಕ್ಕೆ ಭೇಟಿ ನೀಡಿ ಜ್ಞಾನವನ್ನು ಪ್‌ಡೇಟ್ ಮಾಡಿಕೊಳ್ಳೋಣ.
- ಗ್ರಂಥಪಾಲಕರ ಸಹಾಯ ಪಡೆದು ಉತ್ತಮ ಪುಸ್ತಕಗಳನ್ನು ಎರವಲು ಪಡೆದು ಓದಿ ಹಿಂದಿರುಗಿಸೋಣ.
- ಕಾಲೇಜು ಗ್ರಂಥಾಲಯದಲ್ಲಿ ಆಯೋಜನೆಗೊಳ್ಳುವ ಚರ್ಚೆ, ಸಂವಾದದಲ್ಲಿ ಭಾಗವಹಿಸಿ ಜ್ಞಾನವನ್ನು ವಿಸ್ತರಿಸಿಕೊಳ್ಳೋಣ.
- ವಿರಾಮ ವೇಳೆಯಲ್ಲಿ ಅಲ್ಲಲ್ಲಿ ಕುಳಿತು ಸಮಯ ವ್ಯರ್ಥ ಮಾಡುವ ಬದಲಾಗಿ ಲೈಬ್ರರಿಯ ಪುಸ್ತಕ ಓದೋಣ.
- ಕೋರ್ಸ್‌ಗೆ ಮೀಸಲಾದ ಪರಾಮರ್ಶನ ಗ್ರಂಥಗಳನ್ನು ಓದೋಣ.
- ಗ್ರಂಥಾಲಯದ ಓದುಗರ ಬಳಗವನ್ನು ಸೇರಿಕೊಳ್ಳೋಣ ಅಥವಾ ನಮ್ಮದೇ ಆದ ಓದುಗರ ಬಳಗವನ್ನು ಸೃಜಿಸಿಕೊಳ್ಳೋಣ. ಆ ಮೂಲಕ ಓದಿದ ಪುಸ್ತಕಗಳ ಕುರಿತು ಚರ್ಚೆ ಮಾಡೋಣ.
- ಗ್ರಂಥಾಲಯದ ಪಾವಿತ್ರತೆ ಕಾಪಾಡೋಣ.

ಗ್ರಂಥಾಲಯದಲ್ಲಿ ಕೇವಲ ಪುಸ್ತಕಗಳಿರುವುದಿಲ್ಲ, ಬದಲಾಗಿ ನಮ್ಮ ಭವಿಷ್ಯದ ಬೆಳಕೂ ಇದೆ. ಅದನ್ನು ಸರಿಯಾಗಿ ಬಳಸಿಕೊಳ್ಳುವ ಮೂಲಕ ಭವಿಷ್ಯದ ಬೆಳಕಾಗೋಣ.

# ಅಪಾಯಕಾರಿ ಕೆಲಸಕ್ಕೆ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸುವಂತಿಲ್ಲ

■ **ಹಂಪಿ ಟೈಮ್ಸ್ ಕೊಪ್ಪಳ**

ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ ಕಾಯ್ದೆ–1986ರ ತಿದ್ದುಪಡಿ ಕಾಯ್ದೆ–2016 ರನ್ವಯ ಮಕ್ಕಳ ಶಿಕ್ಷಣದ ಹಕ್ಕಿಗೆ ಮಾರಕವಾಗದಂತೆ ಬಾಲ ನಟ/ನಟಿಯಾಗಿ ನಟನಾ ಕೆಲಸ ನಿರ್ವಹಿಸುವ ಚಟುವಟಿಕೆಗಳನ್ನು ಹೊರತುಪಡಿಸಿ, ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಬಾಲ ಕಾರ್ಮಿಕ ಯೋಜನೆಯ ಅಧ್ಯಕ್ಷರಾದ ನಲಿನ್ ಅತುಲ್ ಅವರು ತಿಳಿಸಿದ್ದಾರೆ.

ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ ಕಾಯ್ದೆ–1986ರ ತಿದ್ದುಪಡಿ ಕಾಯ್ದೆ–2016 ಅನ್ವಯ ಕಾಯ್ದೆಯು ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ ಹಾಗೂ ಕಾಯ್ದೆಯು 14 ರಿಂದ 18 ವಯಸ್ಸಿನೊಳಗಿನ ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಇಂತಹ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಂಡಲ್ಲಿ ಅಂತಹ ಮೊದಲ ಸಲದ ಅಪರಾಧಕ್ಕೆ ತಪ್ಪಿತಸ್ಥ ಮಾಲೀಕರಿಗೆ 6 ತಿಂಗಳಿನಿಂದ 2 ವರ್ಷಗಳವರೆಗೆ ಜೈಲು ಶಿಕ್ಷೆ, ರೂ.20,000/– ರಿಂದ ರೂ.50,000/– ರವರೆಗೆ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿರುತ್ತದೆ.

ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1986ರ ಕರ್ನಾಟಕ ನಿಯಮಗಳು '2ಸಿ' ರಲ್ಲಿ ಒಬ್ಬ ಕಲಾವಿದನಾಗಿ ಕೆಲಸ ಮಾಡಬೇಕಾದ ಮಗು(1) ಕಲಂ 3ರ ನಿಬಂಧನೆಗಳನ್ವಯ ನಿರ್ದಿಷ್ಟ ಪರಿಸ್ಥಿತಿಗಳಿಗೆ/ನಿಯಮಗಳಿಗೆ ಒಳಪಟ್ಟಂತೆ ಮಗು ಕಲಾವಿದನಾಗಿ ಕೆಲಸ ಮಾಡಲು ಅನುಮತಿಸಬಹುದಾಗಿದೆ.

ಯಾವುದೇ ಮಗುವನ್ನು ಒಂದು ದಿನದಲ್ಲಿ 5 ಗಂಟೆಗಳಿಗಿಂತ ಹೆಚ್ಚಿನ ಅವಧಿಗೆ ನಟನಾ ಕೆಲಸಕ್ಕೆ ನಿಯೋಜಿಸುವಂತಿಲ್ಲ ಮತ್ತು ವಿಶ್ರಾಂತಿ ಇಲ್ಲದೆ 3 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡಿಸುವಂತಿಲ್ಲ. ಶ್ರವಣ ಮತ್ತು ದೃಶ್ಯ ಮಾಧ್ಯಮದ ಯಾವುದೇ ನಿರ್ಮಾಪಕರು ನಿರ್ಮಿಸಿದ ಅಥವಾ ಯಾವುದೇ ವಾಣಿಜ್ಯ ಪರ ಕಾರ್ಯಕ್ರಮದಲ್ಲಿ ಮಗು ಭಾಗವಹಿಸುವುದಿದ್ದರೆ ಆ ಚಟುವಟಿಕೆ ನಡೆಯುವ ಪ್ರದೇಶದ ಜಿಲ್ಲಾ ದಂಡಾಧಿಕಾರಿಗಳ ಪೂರ್ವಾನುಮತಿ ಪಡೆದು ಭಾಗವಹಿಸುವಂತೆ ಮಾಡುವುದು ಮತ್ತು ಆ ಚಟುವಟಿಕೆ ಪ್ರಾರಂಭಿಸುವ ಪೂರ್ವದಲ್ಲಿ ನಮೂನೆ 'ಸಿ' ಯಲ್ಲಿ ಜಿಲ್ಲಾ ದಂಡಾಧಿಕಾರಿಗೆ ಮುಚ್ಚಳಿಕೆ ಪತ್ರ ಸಲ್ಲಿಸುವುದು ಮತ್ತು ಭಾಗವಹಿಸುವ ಮಕ್ಕಳ ಪಟ್ಟಿ ಪೋಷಕರ ಅಥವಾ ಪಾಲಕರ ಒಪ್ಪಿಗೆ ಪತ್ರವನ್ನು ಸಲ್ಲಿಸಬೇಕು.

ಮಗುವಿನ ಸಂರಕ್ಷತೆಗೆ ಸಂಬಂಧಿಸಿದಂತೆ, ನಿರ್ಮಾಪಕರ ಅಥವಾ ಸಮಾರಂಭದ ಆಯೋಜಕರ ಹೆಸರುಗಳನ್ನು ಒದಗಿಸಬೇಕು. ಮಕ್ಕಳನ್ನು ಬಳಸಿ ಸಂಪೂರ್ಣ ಚಿತ್ರೀಕರಣ ಮಾಡುವ ಸಂದರ್ಭದಲ್ಲಿ ಮಕ್ಕಳ ದುರುಪಯೋಗ ಪ್ರಕರಣ, ನಿರ್ಲಕ್ಷ್ಯ ಅಥವಾ ಶೋಷಣೆ ನಡೆಯದಂತೆ ಸೂಕ್ತ ಮುಂಜಾಗ್ರತ ಕ್ರಮಗಳನ್ನು ಕೈಗೊಂಡಿರಬೇಕೆಂದು ಚಲನಚಿತ್ರಗಳ ಅಥವಾ ದೂರದರ್ಶನದ ಪ್ರದರ್ಶನದ ಹಕ್ಕು ನಿರಾಕರಣೆಗೆ ಒಳಪಟ್ಟಿದೆ ಎಂಬುದನ್ನು ನಿರ್ಮಾಪಕರಿಗೆ ಖಚಿತ ಪಡಿಸಬೇಕು.

ಕಲಂ ಬಿ ಯಲ್ಲಿ ಉಲ್ಲೇಖಿಸಿರುವ ಮುಚ್ಚಳಿಕೆಯು 6 ತಿಂಗಳವರೆಗೆ ಮಾನ್ಯವಾಗಿರುತ್ತದೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ನಿಬಂಧನೆಗಳನ್ನು ಸುರಕ್ಷತೆ ಮತ್ತು ಮಕ್ಕಳ ದುರುಪಯೋಗ ತಡೆ ಕುರಿತಾದ ಮಾನ್ಯತೆ ಪಡೆದ ಮಾರ್ಗಸೂಚಿಗಳು ಮತ್ತು ಇಂತಹ ಉದ್ದೇಶಗಳಿಗಾಗಿ ಸರ್ಕಾರವು ನಿಗದಿತವಾಗಿ ಹೊರಡಿಸಿರುವ ಸುರಕ್ಷತಾ ನೀತಿಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕು.

ಮಗುವಿನ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಖಾತ್ರಿಪಡಿಸಬೇಕು. ಮಗುವಿಗೆ ಸಕಾಲಿಕ ಪೌಷ್ಠಿಕ ಆಹಾರ ಒದಗಿಸಬೇಕು. ದೈನಂದಿನ ಅಗತ್ಯಗಳಿಗೆ ಸಾಕಾಗುವಷ್ಟು ಸಾಮಗ್ರಿಗಳು, ಸ್ವಚ್ಛ ಮತ್ತು ಸುರಕ್ಷಿತವಾದ ಆಶ್ರಯ ಒದಗಿಸಬೇಕು. ಶಿಕ್ಷಣದ ಹಕ್ಕು ಸಂರಕ್ಷಣೆ, ಲೈಂಗಿಕ ಅಪರಾಧಗಳಿಂದ ರಕ್ಷಣೆ ಒಳಗೊಂಡಂತೆ ಮಕ್ಕಳ ರಕ್ಷಣೆ ಕುರಿತಾಗಿ ಕಾಲ ಕಾಲಕ್ಕೆ ಜಾರಿಯಲ್ಲಿರುವ ಎಲ್ಲಾ ಕಾನೂನುಗಳ ಪಾಲನೆ ಮಾಡಬೇಕು. ಮಗು ಶಾಲೆಯ ಪಾಠ ಪ್ರವಚನಗಳಿಗೆ ಗೈರಾಗದಂತೆ ಶಿಕ್ಷಣದಲ್ಲಿ ನಿರಂತರವಾಗಿ ಮುಂದುವರೆಯಲು ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದನ್ನು ಖಾತರಿಪಡಿಸುವುದು ಮತ್ತು ಯಾವುದೇ ಮಗು ನಿರಂತರವಾಗಿ 27 ದಿನಗಳಿಗಿಂತ ಹೆಚ್ಚಿನ ದಿನಗಳು ನಟನಾ ಕೆಲಸದಲ್ಲಿ ತೊಡಗಲು ಅವಕಾಶ ನೀಡಬಾರದು.

ಮಗುವಿನ ರಕ್ಷಣೆ, ಪೋಷಣೆ ಮತ್ತು ಹಿತಾಸಕ್ತಿಯನ್ನು ಕಾಪಾಡಲು ನಿರ್ಮಾಣ ಅಥವಾ ಕಾರ್ಯಕ್ರಮದಲ್ಲಿ ತೊಡಗಿರುವ ಪ್ರತಿ 5 ಮಕ್ಕಳಿಗೆ ಒಬ್ಬರಂತೆ ಜವಾಬ್ದಾರಿ ವ್ಯಕ್ತಿಯನ್ನು ನೇಮಿಸಬೇಕು. ನಿರ್ಮಾಣ ಅಥವಾ ಕಾರ್ಯಕ್ರಮದಿಂದ ಮಗುವಿಗೆ ಬರುವ ಒಟ್ಟು ಆದಾಯದ ಕನಿಷ್ಠ ಶೇ.20 ಅನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಮಗುವಿನ ಹೆಸರಿನಲ್ಲಿ ನಿಶ್ಚಿತ ಠೇವಣಿ ಖಾತೆ ತೆರೆದು ಇಡಬೇಕು ಅದನ್ನು ಮಗು ಪ್ರಾಯಸ್ಥನಾದಾಗ ಪಡೆಯಲು ಅವಕಾಶ ಕಲ್ಪಿಸಬೇಕು. ಯಾವುದೇ ಮಗುವಿನ ಒಪ್ಪಿಗೆ ಮತ್ತು ಇಚ್ಛೆಗೆ ವಿರುದ್ಧವಾಗಿ ಯಾವುದೇ ಧ್ವನಿ, ದೃಶ್ಯ ಮತ್ತು ಕ್ರೀಡಾ ಚಟುವಟಿಕೆ ಅನೌಪಚಾರಿಕ ಮನರಂಜನಾ ಚಟುವಟಿಕೆ ಒಳಗೊಂಡಂತೆ ಅವುಗಳಲ್ಲಿ ಭಾಗವಹಿಸುವಂತೆ ಮಾಡಬಾರದು.

ಈ ಅಂಶಗಳ ಉಲ್ಲಂಘನೆ ಕಂಡು ಬಂದರೆ ಕಾನೂನಾತ್ಮಕವಾಗಿ ಕ್ರಮ ಜರುಗಿಸಲಾಗುವುದು. ಈ ಕುರಿತು ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಕೊಪ್ಪಳ ಹಾಗೂ ಯೋಜನಾ ನಿರ್ದೇಶಕರು, ಜಿಲ್ಲಾ ಬಾಲಕಾರ್ಮಿಕ ಯೋಜನೆ ಕೊಪ್ಪಳ ರವರುಗಳಿಂದ ಪಡೆದುಕೊಳ್ಳಬಹುದು ಎಂದು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಕೊಪ್ಪಳ ರವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಆರೋಗ್ಯ ಇಲಾಖೆಯಿಂದ ಮತದಾನ ಜಾಗೃತಿ



■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಸ್ವೀಪ್ ಸಮಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳ ಹಾಗೂ ಸಮುದಾಯ ಆರೋಗ್ಯ ಕೇಂದ್ರ ಮಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿ ಮಾರ್ಚ್ 30 ರಂದು ಮತದಾನ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮಂಗಳೂರು ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳಾದ ಡಾ॥ ಸಿ.ಎಂ ಹಿರೇಮಠ ಅವರು ಮಾತನಾಡಿ, ಮುಂಬರುವ ಲೋಕಸಭಾ ಚುನಾವಣೆಗಳು ಕರ್ನಾಟಕದಲ್ಲಿ 02 ಹಂತದಲ್ಲಿ ನಡೆಯಲಿದ್ದು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ಪ್ಹಿ.ಪಿ ಅವರು ಮಾತನಾಡಿ, ಭಾರತ ಪ್ರಜಾಪ್ರಭುತ್ವ ದೇಶವಾಗಿದೆ. ಮತದಾನಕ್ಕಿಂತ ಇನ್ನೊಂದಿಲ್ಲ, "ನಾನು ಖಚಿತವಾಗಿ ಮತದಾನ ಮಾಡುವೆ" ಎಂಬ ಘೋಷವಾಕ್ಯದೊಂದಿಗೆ ಮೇ–07 ರಂದು ನಡೆಯುವ ಚುನಾವಣೆ ದಿನದಂದು ಯಾವುದೇ ಮತದಾರ ಮತದಾನದಿಂದ ಹೊರಗುಳಿಯದೆ, ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಸದೃಢ ಪ್ರಜಾಪ್ರಭುತ್ವಕ್ಕಾಗಿ ಮತದಾರರ ಸಾಕ್ಷರತೆ ಎಂಬ ಅಂಶವನ್ನು ಆಧಾರವಾಗಿ ಇಟ್ಟುಕೊಂಡು ಮತದಾನ ಮಾಡುವಂತೆ ತಿಳಿಸಿದರು. ನಂತರ ಮತದಾನ ಕುರಿತು ಪ್ರತಿಜ್ಞಾವಿಧಿ ಬೋಧಿಸಲಾಯಿತು. ಕಾರ್ಯಕ್ರಮದಲ್ಲಿ ಮಕ್ಕಳ ತಜ್ಞರಾದ ಡಾ॥ ಮಂಜುನಾಥ, ಆರೋಗ್ಯ ಮೇಲ್ವಿಚಾರಣಾಧಿಕಾರಿಗಳಾದ ಚನ್ನಬಸಯ್ಯ ಎಸ್, ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

## ಭಾಗ್ಯನಗರ ಪ.ಪಂ: ಆಕ್ಷೇಪಣೆ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಭಾಗ್ಯನಗರ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ವಾರ್ಡ್ ನಂ.15 ರಲ್ಲಿ ಬರುವ ಸರ್ವೇ ನಂ.717/2, ಆಸ್ತಿ ನಂ.26 ರಲ್ಲಿ ವಸತಿ ನಿವೇಶನದಲ್ಲಿ Central District of South India Assemblies of God building ಇವರ ಪರವಾಗಿ ಎಮ್.ದೇವಕುಮಾರ ತಂದೆ ಎ. ಮೋಹನ ಎಂಬುವವರು ಪ್ರಾರ್ಥನಾ ಮಂದಿರ(ಚರ್ಚ್) ಅನ್ನು ನಿರ್ಮಿಸಲು ಕಟ್ಟಡ ಪರವಾನಿಗೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಕುರಿತು ಸಾರ್ವಜನಿಕರಲ್ಲಿ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಖುದ್ದಾಗಿ ಲಿಖಿತ ರೂಪದಲ್ಲಿ ಪ.ಪಂಚಾಯತಿ ಕಾರ್ಯಾಲಯಕ್ಕೆ ಸಲ್ಲಿಸಬೇಕು.





## ನಿತ್ಯ ಪಂಚಾಂಗ

ಮಾಸ: ಪಾಲ್ಗುಣ । ಸಂವತ್ಸರ: ಶೋಭಾಕೃತ

**03–04–2024 – ಬುಧವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರಾಷಾಡ |
| ಯೋಗ | : ಶಿವ |
| ಕರಣ | : ತೈತುಲ |
| ಸೂರ್ಯೋದಯ | : 06:18:19 |
| ಸೂರ್ಯಾಸ್ತ | : 18:42:06 |
| ರಾಹು | : 12:30–14:03 |
| ಯಮಘಂಡ | : 07:51–09:24 |
| ಗುಳಿಕ | : 10:57–12:30 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 02–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1580.33 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 926 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 4.632 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1584.63 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 5554 ಕ್ಯುಸೆಕ್ |
| ಸಾಮರ್ಥ್ಯ | 7.088 ಟಿಎಂಸಿ |

# 18 ವರ್ಷ ಮೇಲ್ಪಟ್ಟ ಎಲ್ಲರೂ ತಪ್ಪದೇ ಮತದಾನ ಮಾಡಿ

## ಡಿಹೆಚ್‌ಓ ಡಾ.ವೈ.ರಮೇಶ್ ಬಾಬು ಹೇಳಿಕೆ | ಆರೋಗ್ಯ ಇಲಾಖೆಯಿಂದ ಮತದಾನ ಜಾಗೃತಿ



■ ಹಂಪಿ ಟೈಮ್ಸ್ ಬಳ್ಳಾರಿ

ಪ್ರಜಾಪ್ರಭುತ್ವ ವ್ಯವಸ್ಥೆಯ ಚುನಾವಣೆಗಳಲ್ಲಿ 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ತಪ್ಪದೇ ತಮ್ಮ ಮತ ಹಕ್ಕನ್ನು ಚಲಾಯಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ಹೇಳಿದರು.

ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಿಲ್ಲರ್ ಪೇಟೆ ನಗರ ಆರೋಗ್ಯ ಕೇಂದ್ರ, ಮರ್ರಿಸ್ವಾಮಿ ಮಠ ಆರೋಗ್ಯ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ನಗರದ ಮಿಲ್ಲರ್‌ಪೇಟೆ ಆರೋಗ್ಯ ಕೇಂದ್ರದಿಂದ ಮಂಗಳವಾರ ಏರ್ಪಡಿಸಿದ್ದ ಮತದಾನ ಜಾಗೃತಿ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

ಬರುವ ಮೇ 07 ರಂದು ನಡೆಯಲಿರುವ ಲೋಕಸಭೆ ಚುನಾವಣೆಯ ಮತದಾನ ದಿನದಂದು ಪ್ರತಿಯೊಬ್ಬರೂ ತಮ್ಮ ಮತದಾನದ ಹಕ್ಕನ್ನು ಚಲಾಯಿಸಬೇಕು. ಪ್ರಜಾಪ್ರಭುತ್ವದಲ್ಲಿ ಮತದಾರ ಪ್ರಭುಗಳಾದ ನಾವು, ಚುನಾವಣೆ ಹಬ್ಬವನ್ನು ಸಂಭ್ರಮದಿಂದ ಆಚರಿಸಬೇಕು ಎಂದರು.

ನಿಷ್ಪಕ್ಷಪಾತ ಚುನಾವಣೆ ನಡೆಸಲು ಮತದಾರರು ಯಾವುದೇ ಆಸೆ, ಆಮಿಷಗಳಿಗೆ ಒಳಗಾಗಬಾರದು. ಸರಿಯಾದ ಅಭ್ಯರ್ಥಿಯನ್ನೇ ಆಯ್ಕೆ ಮಾಡಬೇಕು. ಅಂದಾಗ ಮಾತ್ರ ಸುಭದ್ರ ಪ್ರಜಾಪ್ರಭುತ್ವ ವ್ಯವಸ್ಥೆ ನಿರ್ಮಾಣಗೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್ ದಾಸಪ್ಪನವರ್ ಅವರು ಮತದಾರರ ಪ್ರತಿಜ್ಞಾ ವಿಧಿ ಬೋಧಿಸಿದರು.

ಮತದಾನ ಜಾಗೃತಿ ಜಾಥಾವು ಮಿಲ್ಲರ್‌ಪೇಟೆ ನಗರ ಆರೋಗ್ಯ ಕೇಂದ್ರದಿಂದ ಆರಂಭವಾಗಿ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಮತದಾನ ಜಾಗೃತಿ ಘೋಷವಾಕ್ಯಗಳನ್ನೊಳಗೊಂಡ ಮಾಹಿತಿ ಫಲಕಗಳ ಮೂಲಕ ಅರಿವು ಮೂಡಿಸಿ ಬಿ. ಗೋನಾಳ್‌ವರೆಗೆ ತಲುಪಿತು.

ಈ ವೇಳೆ ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ, ಮಿಲ್ಲರ್‌ಪೇಟೆ ನಗರ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಸೌಜನ್ಯ, ವೈದ್ಯಾಧಿಕಾರಿ ಡಾ.ಗೀತಾ, ಸಿಬ್ಬಂದಿಗಳಾದ ಶಾಂತಮ್ಮ, ಮೇಘರಾಜ, ಆರೋಗ್ಯ ಮೇರಿ, ನೇತ್ರಾ, ಶರತ್, ಮಲ್ಲಿಕಾರ್ಜುನ, ಸೋಮಶೇಖರ, ರಾಜೇಶ್ವರಿ, ಮಾಬುನ್ನಿ, ನಾಗಲಕ್ಷ್ಮಿ, ಪ್ರತಿಭಾ ಸೇರಿದಂತೆ ಆಶಾ ಕಾರ್ಯಕರ್ತೆಯರು ಹಾಗೂ ಮತ್ತಿತರರು ಭಾಗವಹಿಸಿದ್ದರು.

# ಜಿಲ್ಲಾ ಸ್ವೀಪ್ ಸಮಿತಿಯಿಂದ ಸಹಿ ಸಂಗ್ರಹ ಅಭಿಯಾನ



■ ಹಂಪಿ ಟೈಮ್ಸ್ ಹೊಸಪೇಟೆ

ಲೋಕಸಭಾ ಚುನಾವಣೆ–2024ರ ಹಿನ್ನೆಲೆಯಲ್ಲಿ ಮತದಾನ ಜಾಗೃತಿಗಾಗಿ ಸಹಿ ಸಂಗ್ರಹ ಅಭಿಯಾನ ಕಾರ್ಯಕ್ರಮಗಳು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಸ್ವೀಪ್ ಸಮಿತಿಯಿಂದ ಮುಂದುವರೆದಿವೆ.

ನಗರದ ನ್ಯಾಯಾಲಯದ ಸಂಕೀರ್ಣದಲ್ಲಿ ವಕೀಲರ ಸಂಘದ ಸಹಯೋಗದಲ್ಲಿ ಮಂಗಳವಾರ ನಡೆದ ಮತದಾನ ಜಾಗೃತಿ ಅಭಿಯಾನ ಹಾಗೂ ಮತದಾನ ಜಾಗೃತಿ ಸಹಿ ಸಂಗ್ರಹ ಅಭಿಯಾನಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ಚಾಲನೆ ನೀಡಿ ಮಾತನಾಡಿದರು.

ಮತದಾನ ಮಾಡುವುದು ನಮಗೆಲ್ಲರಿಗೂ ಸಂವಿಧಾನಬದ್ಧವಾಗಿ ಬಂದಿರುವ ಹಕ್ಕಾಗಿದೆ. ಕಡ್ಡಾಯವಾಗಿ ಪ್ರತಿಯೊಬ್ಬರು ಮತದಾನ ಮಾಡಿ ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡಬೇಕು ಎಂದು ತಿಳಿಸಿದರು.

ಸಮಾರಂಭದಲ್ಲಿ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಹೇಮಲತಾ ಬಿ. ಹುಲ್ಲೂರ, ಗೌರವಾನ್ವಿತ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹಿಮಾನ್ ನಂದಗಡಿ, ಅಪರ ಹಿರಿಯ ಸಿವಿಲ್ ನ್ಯಾಯಧೀಶರಾದ ರಮೇಶ್‌ಬಾಬು ಬಿ.ಎನ್., ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಕಿಷನ್ ಬಿ.ಮಾಡಲಗಿ, ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ತೃಪ್ತಿ ಧರಣಿ, ಗೌರವಾನ್ವಿತ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಸಂಜೀವ್‌ಕುಮಾರ್ ಜಿ., 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಚೈತ್ರಾ ಜೆ., ನಗರಸಭೆ ಪೌರಾಯುಕ್ತರಾದ ಸಿ.ಚಂದ್ರಪ್ಪ, ವಕೀಲರ ಸಂಘದ ಅಧ್ಯಕ್ಷರಾದ ಕೆ.ಪ್ರಹ್ಲಾದ್, ಜಿಲ್ಲಾ ಪಂಚಾಯತಿಯ ಯೋಜನಾ ಅಂದಾಜು ಮತ್ತು ಮೌಲ್ಯಮಾಪನಾಧಿಕಾರಿ ಪತ್ರಿಬಸಪ್ಪ ಎನ್.ಕೆ ಹಾಗೂ ವಕೀಲರು, ತಾಲೂಕು ಪಂಚಾಯತಿ ಸಿಬ್ಬಂದಿ ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# ಏ.4ಕ್ಕೆ ನಡೆಯಬೇಕಿದ್ದ ಬಾಲ್ಯವಿವಾಹದಿಂದ 5 ಬಾಲಕಿಯರ ರಕ್ಷಣೆ

ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ತಾಲ್ಲೂಕಿನ ಜಿನ್ನಾಪುರ ತಾಂಡದ ದೇವಸ್ಥಾನದಲ್ಲಿ ನಡೆಯಬೇಕಾಗಿದ್ದ 5 ಅಪ್ರಾಪ್ತ ವಯಸ್ಸಿನ ಬಾಲಕಿಯರ ವಿವಾಹವನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ತಡೆಯಲಾಗಿದ್ದು, ಬಾಲಕಿಯರ ಪೋಷಣೆ ಮತ್ತು ರಕ್ಷಣೆಗಾಗಿ ಉದ್ದೇಶದಿಂದ ಅವರನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಲಾಗಿದೆ.

ಏಪ್ರಿಲ್ 04 ರಂದು ಜಿನ್ನಾಪುರ ತಾಂಡಾದ ಶ್ರೀ ಮರಿಯಮ್ಮದೇವಿ ದೇವಸ್ಥಾನದ ಜಾತ್ರಾ ಮಹೋತ್ಸವದಲ್ಲಿ ಆಯೋಜಿಸಿದ್ದ ವೈಯಕ್ತಿಕ ವಿವಾಹಗಳಲ್ಲಿ ಈ ಬಗ್ಗೆ ಮಕ್ಕಳ ಸಹಾಯವಾಣಿ–1098/112 ಗೆ ಕರೆ ಬಂದ ಹಿನ್ನೆಲೆಯಲ್ಲಿ ವನ್ನೂರು ಮತ್ತು 112 ಪೊಲೀಸ್ ಇಲಾಖೆಯ ಸಿಬ್ಬಂದಿಗಳು ತುರ್ತಾಗಿ ಸ್ಥಳಕ್ಕೆ ಧಾವಿಸಿ, ಬಾಲಕಿಯ ಮನೆಗೆ ಭೇಟಿ ಮಾಡಿ ವಿಚಾರಿಸಿ ದಾಖಲೆಗಳನ್ನು ಪರಿಶೀಲಿಸಿದ್ದು, ವಿವಾಹವನ್ನು ಮಾಡುತ್ತಿರುವುದು ತಿಳಿದು ಬಂದಿರುತ್ತದೆ. ಬಾಲ್ಯವಿವಾಹ ನಿಷೇಧ ಕಾಯ್ದೆ–2006ರ ಕುರಿತು ಹಾಗೂ ಬಾಲ್ಯವಿವಾಹದ ದುಷ್ಪರಿಣಾಮಗಳ ಬಗ್ಗೆ ಪೋಷಕರಿಗೆ ತಿಳುವಳಿಕೆಯನ್ನು ನೀಡಿ, ಐವರು ಬಾಲಕಿಯರಿಗೆ 18 ವರ್ಷ (ಜನ್ಮ ದಿನಾಂಕ: (1) 27.07.2006 ವಯಸ್ಸು :17–ವರ್ಷ 8 ತಿಂಗಳು, (2) 01.07.2008 ವಯಸ್ಸು: 15 ವರ್ಷ, (3) 10.04.2008 ವಯಸ್ಸು: 15 ವರ್ಷ 11 ತಿಂಗಳು, (4) 15.08.2009 ವಯಸ್ಸು:14 ವರ್ಷ 7 ತಿಂಗಳು, (5) 26.11.2006 ವಯಸ್ಸು :17 ವರ್ಷ 4 ತಿಂಗಳು) ಪೂರ್ಣಗೊಳ್ಳದ ಕಾರಣ ಬಾಲಕಿಯರನ್ನು ರಕ್ಷಿಸಿ, ಪೋಷಣೆ ಮತ್ತು ರಕ್ಷಣೆಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ತಿಳಿಸಿದ್ದಾರೆ.

# ಸಮಾಜದ ಬಗ್ಗೆ ಕಳಕಳಿ ಹೊಂದಿರಿ

## ಐಜಿಪಿ ಬಿ.ಎಸ್.ಲೋಕೇಶ್ ಕುಮಾರ್ ಹೇಳಿಕೆ | ಪೊಲೀಸ್ ಧ್ವಜ ಕಾರ್ಯಕ್ರಮ



■ ಹಂಪಿ ಟೈಮ್ಸ್ ಬಳ್ಳಾರಿ

ಪೊಲೀಸರು ಸಮಾಜದ ಬಗ್ಗೆ ಕಳಕಳಿ ಭಾವನೆ ಹೊಂದಬೇಕು. ಸಾರ್ವಜನಿಕರ ನೆಮ್ಮದಿಗೆ ಕಾರ್ಯ ಪ್ರವೃತ್ತರಾಗಬೇಕು. ಪೊಲೀಸ್ ಸಿಬ್ಬಂದಿಗೆ ಶಿಸ್ತು ಮತ್ತು ಸಂಯಮ ಬಹಳ ಅವಶ್ಯಕ ಎಂದು ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ಬಿ.ಎಸ್.ಲೋಕೇಶ್ ಕುಮಾರ್ ಅವರು ಹೇಳಿದರು.

ಮಂಗಳವಾರದಂದು, ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಏರ್ಪಡಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಮಾಜದ ಶಾಂತಿಯ ಬದುಕಿಗೆ ಪೊಲೀಸರ ಸೇವೆ ಅತ್ಯಂತ ಶ್ಲಾಘನೀಯವಾದದ್ದು. ಪ್ರತಿನಿತ್ಯವೂ ಒತ್ತಡದಿಂದ ಕೆಲಸ ನಿರ್ವಹಿಸಬೇಕಾಗಿದೆ. ಒತ್ತಡದಲ್ಲಿ ಕಾರ್ಯನಿರ್ವಹಿಸುವ ಪೊಲೀಸರು ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಕರ್ತವ್ಯದ ಜೊತೆಗೆ ಕುಟುಂಬಕ್ಕೂ ಸಮಯ ನೀಡಬೇಕು. ನಿವೃತ್ತರಾದ ಮೇಲೆ ಪೂರ್ಣಪ್ರಮಾಣದಲ್ಲಿ ಕುಟುಂಬದೊಂದಿಗೆ ಬೆರೆತು ಕಾಲ ಕಳೆಯಬೇಕು ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಶಸ್ತ್ರ ಸಹಾಯಕ ನಿವೃತ್ತ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಹೆಚ್.ಎ.ಎಂ.ಚನ್ನಬಸಯ್ಯ ಅವರು ಧ್ವಜ ವಂದನೆ ಸ್ವೀಕರಿಸಿ ಮಾತನಾಡಿ, ರಾಜ್ಯ ಸರ್ಕಾರದ ಸೇವೆಗಳಲ್ಲಿ ಪೊಲೀಸ್ ಸೇವೆ ಅತ್ಯಂತ ಮುಖ್ಯವಾದ ಸೇವೆಯಾಗಿದೆ. ಸಮಾಜದ ದುರ್ಬಲ ವರ್ಗದವರಿಗೆ ನ್ಯಾಯ ದೊರಕಿಸಿ ಕೊಡುವ ಕಾರ್ಯದಲ್ಲಿ ಪೊಲೀಸ್ ಸೇವೆ ಕಾರ್ಯ ವಿಶಿಷ್ಟವಾದದ್ದು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ರಂಜೀತ್ ಕುಮಾರ್ ಬಂಡಾರು ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕರ್ನಾಟಕ ಏಕೀಕರಣವಾದ ನಂತರ ಕರ್ನಾಟಕ ಪೊಲೀಸ್ ಪಡೆಯನ್ನು 1965ರ ಏಪ್ರಿಲ್ 2 ರಂದು ಕರ್ನಾಟಕ ಪೊಲೀಸ್ ಕಾಯ್ದೆಗೆ ಒಳಪಡಿಸಲಾಯಿತು. ಅದರ ಸ್ಮರಣೆಗಾಗಿ ಪ್ರತಿ ವರ್ಷ ಪೊಲೀಸ್ ಧ್ವಜ ದಿನವನ್ನಾಗಿ ರಾಜ್ಯದ ಎಲ್ಲ ಘಟಕಗಳಲ್ಲಿ ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಕಾನೂನು ಹಾಗೂ ಸಾರ್ವಜನಿಕ ಆಸ್ತಿ ಪಾಸ್ತಿಗಳ ಸಂರಕ್ಷಣೆ ಮಾಡಲು ಈ ದಿನವನ್ನು ಮುಡಿಪಾಗಿಡಲಾಗುತ್ತದೆ. ನಿತ್ಯ ಜೀವನದಲ್ಲಿ ಶಾಂತಿ ಸೌಹಾರ್ದತೆಯನ್ನು ನಿರಂತರವಾಗಿ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ತೋರಿದ ಶೌರ್ಯ, ಸಾಹಸ ಹಾಗೂ ನಿಸ್ವಾರ್ಥ ಸೇವೆಯನ್ನು ನೆನಪಿಸುವಂತಹ ದಿನವಿದು. ಪೊಲೀಸ್ ಧ್ವಜಗಳನ್ನು ಮಾರಾಟ ಮಾಡಿ ಸಂಗ್ರಹವಾದ ಹಣವನ್ನು ನಿವೃತ್ತ ಪೊಲೀಸ್ ಅಧಿಕಾರಿಗಳ ಕಲ್ಯಾಣ ನಿಧಿಗೆ ಅರ್ಪಿಸಲಾಗುವುದು ಎಂದರು.

ಇದಕ್ಕೂ ಮೊದಲು, ಹೆಚ್.ಎ.ಎಂ. ಚನ್ನಬಸಯ್ಯ ಅವರು ಪೊಲೀಸ್ ತುಕಡಿಗಳಿಂದ ವಂದನೆ ಸ್ವೀಕರಿಸಿದರು. ನಂತರ ಪಥ ಸಂಚಲನ ನಡೆಯಿತು. ಆ ಬಳಿಕ ಧ್ವಜಗಳ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತಿ ಹೊಂದಿದ ಪೊಲೀಸ್ ಅಧಿಕಾರಿಗಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಕೆ.ಪಿ.ರವಿಕುಮಾರ್, ಎಸ್.ನವೀನ್‌ಕುಮಾರ್ ಸೇರಿದಂತೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ವರ್ಗ ಕುಟುಂಬ ವರ್ಗದವರು ಉಪಸ್ಥಿತರಿದ್ದರು.

# ಎಸ್ಸೆಸ್ಸೆಲ್ಸಿ: ಗಣಿತ ಪರೀಕ್ಷೆ ಸುಸೂತ್ರ

■ ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿಯ ಗಣಿತ ವಿಷಯದ ಪರೀಕ್ಷೆಯು ಏಪ್ರೀಲ್ 2ರಂದು ಸುಸೂತ್ರವಾಗಿ ನಡೆಯಿತು.

ಪರೀಕ್ಷೆಗೆ ಒಟ್ಟು 20,250 ವಿದ್ಯಾರ್ಥಿಗಳು ಹಾಜರಾಗಿದ್ದು, 342 ವಿದ್ಯಾರ್ಥಿಗಳು ಗೈರಾಗಿದ್ದರು. ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 2774, ಹೊಸಪೇಟೆ ತಾಲೂಕಿನಲ್ಲಿ 5762, ಹೂವಿನಹಡಗಲಿ ತಾಲೂಕಿನಲ್ಲಿ 2938, ಕೂಡ್ಲಿಗಿ ತಾಲೂಕಿನಲ್ಲಿ 4647 ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ 4129 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾಲಕಿಯರ ವಸತಿ ನಿಲಯಕ್ಕೆ ದಾಖಲಾತಿ: ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಧಾರವಾಡ ಶಹರದ ಸಪ್ತಾಪುರ ರಸ್ತೆಯಲ್ಲಿರುವ ಮಿಲಿಟರಿ ಬಾಲಕಿಯರ ವಸತಿ ನಿಲಯದಲ್ಲಿ 2024–25ನೇ ಶೈಕ್ಷಣಿಕ ವರ್ಷಕ್ಕಾಗಿ ಧಾರವಾಡ, ಗದಗ, ಹಾವೇರಿ ಮತ್ತು ಬಳ್ಳಾರಿ ಜಿಲ್ಲೆಗಳ ಗ್ರಾಮಾಂತರ ಪ್ರದೇಶ ಹಾಗೂ ರಾಜ್ಯದ ಇತರ ಜಿಲ್ಲೆಗಳಲ್ಲಿರುವ ಯುದ್ಧದಲ್ಲಿ ಮಡಿದ ಮತ್ತು ಮಾಜಿ ಸೈನಿಕರ ಹೆಣ್ಣು ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ.

5ನೇ ತರಗತಿಯಿಂದ ಪಿಯುಸಿ–2 ರ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತದೆ. ವಸತಿ ನಿಲಯದಲ್ಲಿ ವಾಸ್ತವ್ಯ ಮತ್ತು ಊಟೋಪಚಾರಗಳು ಉಚಿತವಾಗಿದ್ದು, ಮಾಜಿ ಸೈನಿಕರ ಹೆಣ್ಣು ಮಕ್ಕಳು ಈ ಸೌಲಭ್ಯದ ಉಪಯೋಗ ಪಡೆಯಬಹುದು. ವಸತಿ ನಿಲಯದಲ್ಲಿ ಧಾರವಾಡ ನಗರದಲ್ಲಿರುವ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಮಾತ್ರ ನಿಲಯದಲ್ಲಿ ಪ್ರವೇಶ ನೀಡಲಾಗುವುದು. ಅರ್ಜಿಗಳನ್ನು ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಏ.25 ರೊಳಗಾಗಿ ಸಲ್ಲಿಸಬೇಕು.

ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣ, ಧಾರವಾಡ ಅಥವಾ ದೂ.0836–2440176 ಗೆ ಸಂಪರ್ಕಿಸಬಹುದು ಎಂದು ಧಾರವಾಡದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.






Printed by: MANJUNATHA .H .B Published by: A. SHUBHA. Owned by: A. SHUBHA and Printed at: AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA